ಸಂಪುಟ : 11 ಸಂಚಿಕೆ: 49 ಪುಟ : 4+2 ಬೆಲೆ: 3.00 ಮಂಗಳವಾರ ಮಾರ್ಚ್ 24 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYASAKSHI KANNADA DAILY ಕನ್ನಡ ದಿನಪತ್ರಿಕೆ




Volume : 11 Issue : 49 Pages : 4+2 Price : 3.00 Tuesday March 24 2026 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಶಾಂತಿಯುತವಾಗಿ ಜರುಗಿದ ಎಸ್‌ಎಸ್‌ಎಲ್‌ಸಿ ವಿಜ್ಞಾನ ಪರೀಕ್ಷೆ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ 2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ವಿಜ್ಞಾನ (ವಿಷಯ ಕೋಡ್: 83) ಪರೀಕ್ಷೆ ಸೋಮವಾರ ಶಾಂತಿಯುತವಾಗಿ ಹಾಗೂ ಸುಸೂತ್ರವಾಗಿ ನಡೆಯಿತು.

ಜಿಲ್ಲೆಯ ಒಟ್ಟು 61 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಜರುಗಿದ್ದು, ಎಲ್ಲಾ ಕೇಂದ್ರಗಳಿಗೆ ಜಿಲ್ಲಾಧಿಕಾರಿಗಳಿಂದ ನೇಮಕಗೊಂಡ ವೀಕ್ಷಕರು ಹಾಜರಿದ್ದರು. ಉಪನಿರ್ದೇಶಕರ (ಆಡಳಿತ) ಕಚೇರಿಯಿಂದ ಜಿಲ್ಲಾ ವೀಕ್ಷಕ ದಳ ಹಾಗೂ ಸ್ಥಾನಿಕ ಜಾಗೃತ ದಳದ ಅಧಿಕಾರಿಗಳನ್ನು ನಿಯೋಜಿಸಲಾಗಿತ್ತು.

ಪರೀಕ್ಷೆಗೆ ಅಗತ್ಯವಿರುವ ಪ್ರಶ್ನೆಪತ್ರಿಕೆಗಳನ್ನು ನಿಗದಿತ ಸಮಯಕ್ಕೆ ಸರಿಯಾಗಿ ಎಲ್ಲಾ ಕೇಂದ್ರಗಳಿಗೆ ತಲುಪಿಸಲಾಗಿತ್ತು. ಪರೀಕ್ಷೆ ಪೂರ್ಣಗೊಂಡ ನಂತರ ಉತ್ತರ ಪತ್ರಿಕೆಗಳನ್ನು ಪೊಲೀಸ್ ಬಿಗಿ ಬಂದೋಬಸ್ತಿನಲ್ಲಿ ಸಂಗ್ರಹಿಸಿ ಭದ್ರತಾ ಕೊಠಡಿಯಲ್ಲಿ ಇಡಲಾಗಿದೆ.

ಪರೀಕ್ಷಾ ಪ್ರಕ್ರಿಯೆ ಸಂಪೂರ್ಣವಾಗಿ ಯಾವುದೇ ಅಡಚಣೆ ಇಲ್ಲದೆ ಯಶಸ್ವಿಯಾಗಿ ನಡೆದಿರುವುದಾಗಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು (ಆಡಳಿತ) ಆರ್.ಎಸ್. ಬುರಡಿ ತಿಳಿಸಿದ್ದಾರೆ.

## ಮಾ.25ರಂದು ವಿಶ್ವ ಗ್ರಾಹಕರ ದಿನಾಚರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಹಾಗೂ ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇವರ ಸಂಯುಕ್ತಾಶ್ರಯದಲ್ಲಿ ಮಾರ್ಚ್ 25ರಂದು ಮಧ್ಯಾಹ್ನ 3 ಗಂಟೆಗೆ ನಾಗಾವಿಯ ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕೌಶಲ್ಯ ವಿಕಾಸ ಭವನ, ಗ್ರಾಮ ಗಂಗೋತ್ರಿ ಆವರಣದಲ್ಲಿ ವಿಶ್ವ ಗ್ರಾಹಕರ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಹಾಗೂ ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿ.ಎನ್. ಶ್ರೀಧರ ಉದ್ಘಾಟಿಸಲಿದ್ದು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಎ.ಜಿ. ಮಾಲ್ದಾರ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವಿಶ್ವವಿದ್ಯಾಲಯದ ಕುಲಪತಿಗಳು (ಪ್ರ) ಹಾಗೂ ಕುಲಸಚಿವ ಪ್ರೊ. ಡಾ. ಸುರೇಶ ವಿ. ನಾಡಗೌಡರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಿ.ಎಸ್. ಶಿವನಗೌಡ್ರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ ಜಗದೀಶ್, ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ.ಆರ್., ಜಿಲ್ಲಾಧಿಕಾರಿಗಳ ಕಾನೂನು ಸಲಹೆಗಾರ ಎಸ್.ಜಿ. ಪಲ್ಲೇದ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಆರ್.ಜಿ. ಕಲ್ಲೂರ ಹಾಗೂ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮಹಿಳಾ ಸದಸ್ಯೆ ಶ್ರೀಮತಿ ಯಶೋಧಾ ಪಾಟೀಲ ಭಾಗವಹಿಸಲಿದ್ದಾರೆ.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಜಿಲ್ಲಾ ಅಂಕಿತ ಅಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಎಂ. ಗಂಗಪ್ಪ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕ ಎಸ್.ಡಿ. ಪಾಟೀಲ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆಯ ಸಹಾಯಕ ನಿಯಂತ್ರಕ ಶ್ರೀಮತಿ ಆರ್.ಎಸ್. ಪಟ್ಟಣಶೆಟ್ಟಿ ಸರ್ವರಿಗೂ ಸ್ವಾಗತ ಕೋರಿದ್ದಾರೆ.

### ಜಿಲ್ಲಾಡಳಿತದಿಂದ ಶ್ರೀ ದೇವರ ದಾಸಿಮಯ್ಯ ಜಯಂತಿ ಆಚರಣೆ; ಸಾಧಕರಿಗೆ ಸನ್ಮಾನ, ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ!

# ವಚನಗಳ ಮೂಲಕ ಸಮಾಜ ಸುಧಾರಣೆ ಸಂದೇಶ

■ ವಿಜಯಸಾಕ್ಷಿ ಸುದ್ದಿ, ಗದಗ

ಆದ್ಯ ವಚನಕಾರ ನೇಕಾರ ಸಂತ ಶ್ರೀ ದೇವರ ದಾಸಿಮಯ್ಯನವರು ತಮ್ಮ ವಚನಗಳ ಮೂಲಕ ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಹೇಳಿದರು.

ಗದಗ-ಬೆಟಗೇರಿಯ ಟರ್ನಲ್ ಪೇಟೆಯ ಶ್ರೀ ದೇವರ ದಾಸಿಮಯ್ಯ ವೇದಿಕೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸೋಮವಾರ ಹಮ್ಮಿಕೊಳ್ಳಲಾಗಿದ್ದ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇವರ ದಾಸಿಮಯ್ಯನವರು 10ನೇ ಶತಮಾನದ ಮಹಾನ್ ವಚನಕಾರರಾಗಿದ್ದು, ನೇಕಾರ ಕಾಯಕದ ಮೂಲಕ ಜೀವನ ಸಾಗಿಸುತ್ತಿದ್ದರು. ತಮ್ಮ ಅರ್ಥಪೂರ್ಣ ವಚನಗಳ ಮೂಲಕ ಭಕ್ತಿ, ಕಾಯಕ ಮತ್ತು ಸಮಾಜ ಸುಧಾರಣೆಯ ಮಹತ್ವವನ್ನು ಸಾರಿದವರು. ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.



ಉಪನ್ಯಾಸಕರಾದ ರಾಘವೇಂದ್ರ ಕೊಪ್ಪಳ ಮಾತನಾಡಿ, ದೇವರ ದಾಸಿಮಯ್ಯನವರು ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಮುದನೂರು ಗ್ರಾಮದಲ್ಲಿ ಜನಿಸಿದ್ದು, ರಾಮಲಿಂಗೇಶ್ವರ ದೇವಾಲಯ ಅವರ ಆರಾಧನಾ ಕೇಂದ್ರವಾಗಿತ್ತು ಎಂದರು. ಅವರ ಅಂಕಿನಾಮ 'ರಾಮನಾಥ' ಆಗಿದ್ದು, ಶೈವ ಪರಂಪರೆಯಲ್ಲಿ ಪ್ರಮುಖ ಸ್ಥಾನ ಪಡೆದಿದ್ದಾರೆ ಎಂದು ವಿವರಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ನಂದಾ ಹನಬರಟ್ಟಿ ಮಾತನಾಡಿ, ಇಂದಿನ ಯುವಕರು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು ಹಾಗೂ ಸರ್ಕಾರದ ಯೋಜನೆಗಳ ಸೌಲಭ್ಯಗಳನ್ನು ಪಡೆಯಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶೈಕ್ಷಣಿಕ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಯಿತು. ದೇವರ ದಾಸಿಮಯ್ಯ ಜಯಂತಿ ಅಂಗವಾಗಿ ನಡೆದ ವಚನ ಸ್ಪರ್ಧೆ ಮತ್ತು ನಿಬಂಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

> "ದೇವರ ದಾಸಿಮಯ್ಯನವರ ವಚನಗಳು ಸಮಾಜದ ಅಂಕುಡೊಂಕುಗಳನ್ನು ತಿದ್ದುವ ದೀಪವಾಗಿವೆ; ಅವರ ತತ್ವಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು"
> – ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಚಿ, ನಗರಸಭೆ ಸದಸ್ಯರಾದ ರಾಘವೇಂದ್ರ ಯಳವತ್ತಿ, ಲಕ್ಷ್ಮೀ ಖಾಕಿ, ಪೂರ್ಣಿಮಾ ಭರದ್ವಾಜ್, ಪೌರಾಯುಕ್ತ ರಾಜಾರಾಮ ಪವಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಸವರಾಜ ಬಳ್ಳಾರಿ, ಪ್ರಮುಖರಾದ ದಶರಥರಾಜ ಕೊಳ್ಳಿ, ರಮೇಶ ಗಡ್ಡಿ, ಅಶೋಕ ಹೊನ್ನಳ್ಳಿ, ರಮೇಶ ಹತ್ತಿಕಾಳ, ಶ್ರೀನಿವಾಸ ಹುಬ್ಬಳ್ಳಿ, ಮಲ್ಲಿಕಾರ್ಜುನ ಐಲಿ, ಆರ್.ಕೆ. ಹುಬ್ಬಳ್ಳಿ, ಶಕುಂತಲಾ ಅಕ್ಕಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಅನಿಲ ಗಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿ, ದೊಡ್ಡಪ್ಪ ಮೂಲಿಮನಿ ಕಾರ್ಯಕ್ರಮ ನಿರೂಪಿಸಿದರು.

### 1.42 ಕೋಟಿ ರೂ ವೆಚ್ಚದ ನೂತನ ಸರಕಾರಿ ಕಾಲೇಜು ಕಟ್ಟಡ ಉದ್ಘಾಟಿಸಿದ ಶಾಸಕ ಜಿ ಎಸ್ ಪಾಟೀಲ

# ಗುಣಮಟ್ಟದಿಂದ ನಿರ್ಮಿಸಲಾದ ಕಟ್ಟಡದಲ್ಲಿ ಗುಣಮಟ್ಟದ ಅಕ್ಷರ ಜ್ಞಾನ ದೊರಕಬೇಕು

■ ವಿಜಯಸಾಕ್ಷಿ ಸುದ್ದಿ, ರೋಣ

ಗುಣಮಟ್ಟದಿಂದ ನಿರ್ಮಿಸಲಾದ ಕಟ್ಟಡದಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಅಕ್ಷರ ಜ್ಞಾನ ದೊರಕಬೇಕು ಎಂದು ರಾಜ್ಯ ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷರು, ಶಾಸಕರಾದ ಜಿ.ಎಸ್. ಪಾಟೀಲ ಹೇಳಿದರು.

ಭಾನುವಾರ ಎಂಆರ್‌ಬಿಸಿ ಹತ್ತಿರ 1 ಕೋಟಿ 42 ಲಕ್ಷ ರೂಗಳ ವೆಚ್ಚದಲ್ಲಿ ನಿರ್ಮಿಸಲಾದ ನೂತನ ಸರಕಾರಿ ಸ್ವಾತಂತ್ರ್ಯ ಪದವಿ ಪೂರ್ವ ಕಾಲೇಜು ಕಟ್ಟಡದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಶಾಸಕರು, ಸರಕಾರಿ ಕಾಲೇಜಿಗೆ ಬರುವ ವಿದ್ಯಾರ್ಥಿಗಳು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಾಗಿರುತ್ತಾರೆ. ಆದರೆ ಅವರಲ್ಲಿ ಪ್ರತಿಭೆ ಇರುತ್ತೆ ಎನ್ನುವುದನ್ನು ಯಾರು ಕೂಡ ಮರೆಯಬಾರದು. ಹೀಗಾಗಿ ಸರಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರಕಬೇಕು ಎಂಬುದು ನನ್ನ ಸೇರಿದಂತೆ ಸರಕಾರದ ಇಚ್ಛೆಗೂ ಸಂಬಂಧಪಟ್ಟಿದ್ದು. ಈ ನಿಟ್ಟಿನಲ್ಲಿ ಉಪನ್ಯಾಸಕರು ಕಾರ್ಯ ಪ್ರವೃತ್ತರಾಗಬೇಕು, ಜೊತೆಗೆ ದಾಖಲೆ ಪ್ರಮಾಣ ಕೂಡ ಹೆಚ್ಚಿಸಬೇಕು ಎಂದರು.



ಮತಕ್ಷೇತ್ರದಲ್ಲಿನ ಪ್ರತಿಯೊಂದು ಗ್ರಾಮಗಳಲ್ಲಿನ ಶಾಲೆಗಳಿಗೆ ಅನುದಾನವನ್ನು ಒದಗಿಸಲಾಗಿದೆ. ಅಲ್ಲದೆ ಹಳೆ ಕಟ್ಟಡಕ್ಕೆ ಈ ಹಿಂದೆ 30 ಲಕ್ಷ ರೂಗಳ ಅನುದಾನವನ್ನು ಒದಗಿಸಲಾಗಿತ್ತು, ಆದರೂ ಸಹ ಕಟ್ಟಡ ಬಾಳಿಕೆ ಬರುವುದಿಲ್ಲ ಎಂಬುದನ್ನು ಅರಿತುಕೊಂಡು ಹೊಸ ಕಾಲೇಜು ಕಟ್ಟಡವನ್ನು ನಿರ್ಮಿಸಲಾಗಿದೆ. ವಿದ್ಯಾರ್ಥಿಗಳು ಕಟ್ಟಡದ ಲಾಭವನ್ನು ಪಡೆದುಕೊಂಡು ಸಮಾಜದಲ್ಲಿ ಗೌರವಯುತ ಬದುಕನ್ನು ಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇನ್ನು ರಾತ್ರಿ ಸಮಯದಲ್ಲಿ ಕಾಲೇಜು ಕಟ್ಟಡದ ಆವರಣದಲ್ಲಿ ಆಕ್ರಮಿ ಸಾರಾಯಿ ಸೇವನೆ ನಡೆಯುತ್ತದೆ. ಅಲ್ಲದೆ ಹಳೆ ಕಟ್ಟಡದ ಕಿಟಕಿ ಗ್ಲಾಸ್‌ಗಳನ್ನು ಒಡೆದು ಹಾಕಿ ಸಾರಾಯಿ ಪಾಕೀಟಗಳನ್ನು ಕೊಠಡಿ ಒಳಗಡೆ ಎಸೆಯುತ್ತಾರೆ ಎಂದು ಪ್ರಭಾರಿ ಪ್ರಾಚಾರ್ಯ ಬಡಿಗೇರರವರು ಶಾಸಕರ ಗಮನಕ್ಕೆ ತರುತ್ತಿದ್ದಂತೆ ಆಕ್ರೋಶಗೊಂಡ ಶಾಸಕರು ಕಾಲೇಜಿನ ಎಸ್‌ಡಿಎಂಸಿ ಸದಸ್ಯರನ್ನು ತೀವ್ರ ತರಾಟೆಗೆ ತೆಗೆದುಕೊಂಡರು, ಕಾಲೇಜಿನ ಸುಧಾರಣೆಗಾಗಿ ನಿಮ್ಮನ್ನು ನೇಮಕ ಮಾಡಲಾಗಿದ್ದು, ನಿರ್ಲಕ್ಷ್ಯ ವಹಿಸಿದರೆ ಹೇಗೆ ಎಂದು ಪ್ರಶ್ನಿಸಿದರು. ಇಂತಹ ಕೆಟ್ಟ ಘಟನೆಗಳು ಮತ್ತೆ ಮರುಕಳಿಸದಂತೆ ನಿಗಾವಹಿಸಬೇಕು ಎಂದು ಹೇಳಿದರು.

ಪಟ್ಟಣದ ಹಿರಿಯರು ಸಹ ಇಂತಹ ಕೆಟ್ಟ ಮನಸ್ಥಿತಿಯ ಯುವಕರಿಗೆ ಬೆಂಬಲಿಸಬಾರದು, ಇಲ್ಲಿ ನಮ್ಮ ಮಕ್ಕಳು ಶಿಕ್ಷಣ ಪಡೆಯಲು ಬರುತ್ತಾರೆ ಎಂಬುದು ತಿಳಿದುಕೊಳ್ಳಬೇಕು. ಇಂತಹ ಘಟನೆಗಳು ಪಟ್ಟಣದ ಹೆಸರನ್ನು ಕೆಡಿಸುತ್ತವೆ. ಹೀಗಾಗಿ ಹಿರಿಯರು ಸಹ ಕಠಿಣ ನಿರ್ಧಾರ ತೆಗೆದುಕೊಂಡಾಗ ಮಾತ್ರ ಅಸಹ್ಯಕರ ಬೆಳವಣಿಗೆಗಳನ್ನು ನಿಲ್ಲಿಸಲು ಸಾಧ್ಯ ಎಂದ ಶಾಸಕರು ಎಸ್‌ಡಿಎಂಸಿ ಸದಸ್ಯರುಗಳು ರಾತ್ರಿ ಸಮಯದಲ್ಲಿ ಸಂಚರಿಸಿ ಕಿಡಿಗೇಡಿಗಳು ಸಿಕ್ಕಲ್ಲಿ ಪೋಲೀಸರಿಗೆ ಒಪ್ಪಿಸಿ. ಭಯ ಪಡಬೇಡಿ ಎಂದರು.

ಕಾರ್ಯಕ್ರಮದಲ್ಲಿ ಬಸವರಾಜ ನವಲಗುಂದ, ರಾಜಣ್ಣ ಸುಂಕದ, ಯೂಸುಫ್ ಇಟಗಿ, ವಿ.ಬಿ. ಸೋಮನಕಟ್ಟಿಮಠ, ಬಾವಾಸಾಬ ಬೆಟಗೇರಿ, ಮೌನೇಶ ಹಾದಿಮನಿ, ಮಹೇಶ ಕಳಸಣ್ಣವರ, ಅಸ್ಲಂ ಕೊಪ್ಪಳ, ಬಸವರಾಜ ಜಗ್ಗಲ, ಕೆ.ಕೆ. ಮುಲ್ಲಾ, ಶಬ್ಬೀರಹ್ಮದ ಖಾಜಿ, ಎಚ್.ಬಿ. ದಿಂಡೂರ, ದುರ್ಗಪ್ಪ ಹಿರೇಮನಿ, ದಾವಲಸಾಬ ಬಾಡಿನ ಸೇರಿದಂತೆ ಕಾಲೇಜಿನ ಉಪನ್ಯಾಸಕರುಗಳು ಉಪಸ್ಥಿತರಿದ್ದರು.

## ಸೋಮೇಶ್ವರ ದೇವಾಲಯ ಹುಂಡಿ ತೆರವು: ರೂ.1.68 ಲಕ್ಷ ಸಂಗ್ರಹ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಐತಿಹಾಸಿಕ ಪ್ರಸಿದ್ಧ ಶ್ರೀ ಸೋಮೇಶ್ವರ ದೇವಸ್ಥಾನದ ಹುಂಡಿಯನ್ನು ರವಿವಾರ ಸಂಜೆ ವಿವಿಧ ಕಮೀಟಿಗಳ ಸಮ್ಮುಖದಲ್ಲಿ ತೆರೆಯಲಾಗಿದ್ದು, ಭಕ್ತರು ಸಲ್ಲಿಸಿದ ಕಾಣಿಕೆಯಿಂದ ಸುಮಾರು ರೂ.1 ಲಕ್ಷ 68 ಸಾವಿರ ಹಣ ಸಂಗ್ರಹವಾಗಿದೆ.

ಸಂಜೆ ದೇವರಿಗೆ ಪೂಜೆ ಸಲ್ಲಿಸಿದ ಬಳಿಕ ಶ್ರೀ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮೀಟಿ ಅಧ್ಯಕ್ಷ ಗುರುರಾಜ ಪಾಟೀಲ ಕುಲಕರ್ಣಿ, ಜಾತ್ರಾ ಕಮೀಟಿ ಅಧ್ಯಕ್ಷ ಕುಬೇರಪ್ಪ ಮಹಾಂತಶೆಟ್ಟರ ಹಾಗೂ ದೇವಸ್ಥಾನದ ಅರ್ಚಕರ ಸಮಿತಿ ಅಧ್ಯಕ್ಷ ದಿಗಂಬರ ಪೂಜಾರ ಅವರ ಬಳಿ ಇರುವ ಕೀಲಿಗಳ ಮೂಲಕ ಎಲ್ಲರ ಸಮ್ಮುಖದಲ್ಲಿ ಹುಂಡಿಯನ್ನು ತೆರೆಯಲಾಯಿತು. ನಂತರ ಭಕ್ತರು ಸೇರಿ ಹಣವನ್ನು ಎಣಿಸಿದರು.

ಎಣಿಕೆಯ ನಂತರ ಸಂಗ್ರಹವಾದ ಹಣವನ್ನು ಶ್ರೀ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮೀಟಿ, ಜಾತ್ರಾ ಕಮೀಟಿ ಮತ್ತು ಅರ್ಚಕರ ಸಮಿತಿಗಳಿಗೆ ಹಂಚಿಕೆ ಮಾಡಲಾಯಿತು. ಈ ಹಣವನ್ನು ಜಾತ್ರಾ ಮಹೋತ್ಸವ, ಪುಲಿಗೆರೆ ಉತ್ಸವ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳಿಗೆ ಬಳಕೆ ಮಾಡಲಾಗುತ್ತದೆ ಎಂದು ತಿಳಿಸಲಾಯಿತು.



> "ಪ್ರತಿ ವರ್ಷ ಯುಗಾದಿ ಹಬ್ಬದ ನಂತರ ಹುಂಡಿಯನ್ನು ತೆರೆಯುವ ಪದ್ಧತಿ ಇದೆ. ಭಕ್ತರು ನೀಡುವ ಕಾಣಿಕೆ ದೇವಸ್ಥಾನದ ಅಭಿವೃದ್ಧಿ ಹಾಗೂ ಜಾತ್ರಾ ಮಹೋತ್ಸವಗಳಿಗೆ ಉಪಯೋಗವಾಗುತ್ತದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರ ನೀಡಬೇಕು."
> – ಚನ್ನಪ್ಪ ಜಗಲಿ, ಖಜಾಂಚಿ

ಈ ಸಂದರ್ಭದಲ್ಲಿ ನಿಕಟಪೂರ್ವ ಅಧ್ಯಕ್ಷ ಚಂಬಣ್ಣ ಬಾಳಿಕಾಯಿ, ಸಿದ್ದನಗೌಡ ಬಳ್ಳೊಳ್ಳಿ, ಪ್ರವೀಣ ಬಾಳಿಕಾಯಿ, ನೀಲಪ್ಪ ಕರ್ಜೆಕಣ್ಣವರ, ಶಿವಯೋಗಿ ಅಂಕಲಕೋಟಿ, ಸುರೇಶ ರಾಚನಾಯ್ಕರ, ಸೋಮಣ್ಣ ಮುಳಗುಂದ, ಮಯೂರಗೌಡ ಪಾಟೀಲ, ವಿರುಪಾಕ್ಷಪ್ಪ ಆದಿ, ಜಯಪ್ರಕಾಶ ಹೊಟ್ಟಿ, ಬಂಗಾರಪ್ಪ ಮುಳಗುಂದ, ಎಸ್.ಪಿ. ಪಾಟೀಲ, ರಾಘವೇಂದ್ರ ಪೂಜಾರ, ಸಮೀರ ಪೂಜಾರ, ಪ್ರಕಾಶ ಮುಳಗುಂದ, ಬಸವರಾಜ ಮೆಣಸಿನಕಾಯಿ, ಕಾಶಪ್ಪ ಮುಳಗುಂದ, ಚನ್ನಪ್ಪ ಚಿಂಚಲಿ, ನಂದೀಶ ಬಂಡಿವಾಡ, ರಾಮಣ್ಣ ಗೌರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

### ಬಡತನವನ್ನು ಮೀರಿ ಕುಸ್ತಿಯಲ್ಲಿ ಸಾಧನೆ : ರಾಜ್ಯದಿಂದ ರಾಷ್ಟ್ರೀಯ ಮಟ್ಟಕ್ಕೆ ಹೆಜ್ಜೆ

# ಕುಸ್ತಿಯಲ್ಲಿ ರಾಷ್ಟ್ರೀಯ ಮಟ್ಟಕ್ಕೇರಿದ ರಾಧಿಕಾ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಗ್ರಾಮೀಣ ಭಾಗದ ಮಕ್ಕಳು ಕ್ರೀಡೆಯಲ್ಲಿ ಆಸಕ್ತಿ ತೋರುತ್ತಿಲ್ಲ, ಸಾಧನೆ ಮಾಡುತ್ತಿಲ್ಲ ಎಂಬ ಕೂಗಿನ ಹಿಂದೆಯೇ ನರೇಗಲ್ಲದ ರಾಧಿಕಾ ವಿಶ್ವನಾಥ ತೊಂಡಿಹಾಳ ಕುಸ್ತಿಯಲ್ಲಿ ತಾನಿದ್ದೇನೆ ಎಂದು ಸಾಧಿಸಿ ತೋರಿಸಿದ್ದಾಳೆ.

ಒಂದೂವರೆ ವರ್ಷದವಳಾಗಿದ್ದಾಗಲೇ ತಂದೆಯನ್ನು ಕಳೆದುಕೊಂಡ ರಾಧಿಕಾ ತಾಯಿಯ ಆಶ್ರಯದಲ್ಲಿ ಬೆಳೆದಳು. ಶಿಕ್ಷಣದ ಜೊತೆಗೆ ಕುಸ್ತಿ ಅಭ್ಯಾಸವನ್ನು ತೀವ್ರವಾಗಿ ಬೆಳೆಸಿಕೊಂಡಿದ್ದು, ತಾಯಿ ರಾಜೇಶ್ವರಿ ಲಕ್ಕುಂಡಿ ಮತ್ತು ನಿವೃತ್ತ ಸೈನಿಕ ಶರಣಗೌಡ ಬೇಲೇರಿ ಅವರ ಮಾರ್ಗದರ್ಶನದಲ್ಲಿ ತರಬೇತಿ ಪಡೆದಳು. 8ನೇ ತರಗತಿಯಲ್ಲಿ ಇದ್ದಾಗಲೇ ಜಾರ್ಖಂಡದಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ 5ನೇ ಸ್ಥಾನ ಪಡೆದರು. 2019 ರಲ್ಲಿ ಲಕ್ಕುಂಡಿ ಉತ್ಸವದಲ್ಲಿ ಅತ್ತಿಮಬ್ಬೆ ಪ್ರಶಸ್ತಿ ಪಡೆದು ತನ್ನ ಶಕ್ತಿಯ ಮುಂಚೂಣಿಯನ್ನು ತೋರಿಸಿದ್ದರು.

ತರಬೇತುದಾರರ ಅಕಾಲಿಕ ಮರಣದ ನಂತರ, ರಾಧಿಕಾ ಹಿಂಜರಿಯದೆ ಭರತೇಶ ಪಿ.ಪೂ. ಕಾಲೇಜಿನ ಲೇಡಿ ಕೋಚರ್ ಡಿವಾಯ್ಸ್ ಸ್ಪೋರ್ಟ್ಸ್ ಹಾಸ್ಟೆಲ್‌ನಲ್ಲಿ ತರಬೇತಿ ಮುಂದುವರೆಸಿದಳು. 2023-24ರ ರಾಷ್ಟ್ರೀಯ ಕುಸ್ತಿ ಪಂದ್ಯಾವಳಿಯಲ್ಲಿ ಉತ್ತರ ಪ್ರದೇಶದಲ್ಲಿ ನಾಲ್ಕನೆ ಸ್ಥಾನ ಪಡೆದಳು. ಇದೇ ವರ್ಷ ಮಂಗಳೂರಿನ ತಣ್ಣೀರಬಾವಿ ಕುಸ್ತಿ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದಿದ್ದು, ಚಿಕ್ಕೋಡಿ ತಾಲ್ಲೂಕಿನ ನಾಗರಮಳ್ಳೊಳ್ಳಿ ಜಾತ್ರಾಮಹೋತ್ಸವದಲ್ಲಿ ಸತತ ಮೂರು ವರ್ಷ ಪ್ರಥಮ ಸ್ಥಾನ ಪಡೆದಿದ್ದಾರೆ.

2026ರ ಫೆ. 6 ರಿಂದ 8ರವರೆಗೆ ನಂಜನಗೂಡಿನಲ್ಲಿ ನಡೆದ "ಕರ್ನಾಟಕ ಕುಮಾರಿ" ಕುಸ್ತಿ ಪಂದ್ಯಾವಳಿಯಲ್ಲಿ ಮತ್ತೊಂದು ಬೆಳ್ಳಿಗದೆ ಪಡೆದು ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಗೊಂಡ ರಾಧಿಕಾ ಜಿಲ್ಲೆಯ ಕ್ರೀಡಾ ಪ್ರೇಮಿಗಳ ಪ್ರಶಂಸೆಗೆ ಪಾತ್ರಳಾಗಿದ್ದಾಳೆ.



> ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ಕುಸ್ತಿಯಲ್ಲಿ ಸಾಧನೆ ಮಾಡಿರುವ ರಾಧಿಕಾ ತೊಂಡಿಹಾಳ ಕ್ರೀಡಾ ಸಾಧನೆ ಮೆಚ್ಚುವಂತದ್ದು. ಅವಳ ಸಾಧನೆಗೆ ಬೇಕಾಗುವ ತರಬೇತುದಾರರ ಕೊರತೆಯ ಬಗ್ಗೆ ಜಿಲ್ಲೆಯ ಯುವ ಸಬಲಿಕರಣ ಮತ್ತು ಕ್ರೀಡಾ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸುತ್ತೇನೆ"
> – ಜಿ.ಎಸ್. ಪಾಟೀಲ ಶಾಸಕರು, ರೋಣ.

> "ನಾನು 7 ರಾಜ್ಯಮಟ್ಟದ ಪಂದ್ಯಗಳು ಹಾಗೂ 6 ರಾಷ್ಟ್ರೀಯ ಕುಸ್ತಿ ಪಂದ್ಯಗಳನ್ನಾಡಿದ್ದೇನೆ. ಅಂತಾರಾಷ್ಟ್ರೀಯ ಪಂದ್ಯಗಳಲ್ಲಿಯೂ ಖಂಡಿತ ಗೆಲುವು ಸಾಧಿಸುತ್ತೇನೆ ಎಂಬ ವಿಶ್ವಾಸ ನನಗಿದೆ"
> – ರಾಧಿಕಾ, ಕುಸ್ತಿಪಟು

ನರೇಗಲ್ಲ ಪಟ್ಟಣಕ್ಕೆ ಆಗಮಿಸುತ್ತಿದ್ದಂತೆ ಕ್ರೀಡಾಭಿಮಾನಿಗಳು ಬಸ್ ನಿಲ್ದಾಣದಿಂದ ರಾಧಿಕಾಳನ್ನು ತೆರೆದ ಜೀಪಿನಲ್ಲಿ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ, ನಂತರ ಪಟ್ಟಣದ ಶ್ರೀ ಗಣೇಶ ದೇವಸ್ಥಾನದಲ್ಲಿ ಸನ್ಮಾನಿಸಿದ್ದು, ತನ್ನ ಜೀವನದ ಅತ್ಯಮೌಲ್ಯ ಕ್ಷಣಗಳಲ್ಲಿ ಒಂದು ಎಂದು ರಾಧಿಕಾ ಖುಷಿ ಹಂಚಿಕೊಂಡಿದ್ದಾರೆ.

# ಅಂಗಡಿ-ವಾಣಿಜ್ಯ ಸಂಸ್ಥೆಗಳ ನೋಂದಣಿ ಕಡ್ಡಾಯ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರಸಭೆ ವ್ಯಾಪ್ತಿಯಲ್ಲಿರುವ ಎಲ್ಲಾ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು ಕಡ್ಡಾಯವಾಗಿ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ-1961 ಹಾಗೂ ನಿಯಮಗಳು-1963ರ ಅಡಿಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕೆಂದು ಕಾರ್ಮಿಕ ಇಲಾಖೆ ಸೂಚನೆ ನೀಡಿದೆ.

ಈ ಬಗ್ಗೆ ಮಾಹಿತಿ ನೀಡಿದ ಕಾರ್ಮಿಕ ನಿರೀಕ್ಷಕರಾದ ಉಮೇಶ್ ಎಸ್. ಹುಲ್ಲಣ್ಣವರ ಅವರು, ಈಗಾಗಲೇ ಕಾರ್ಮಿಕ ನಿರೀಕ್ಷಕರ ಕಚೇರಿ, 2ನೇ ವೃತ್ತ ಗದಗದಲ್ಲಿ ನೋಂದಣಿ ಮಾಡಿಕೊಂಡಿರುವ ಸಂಸ್ಥೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಅಂಗಡಿ ಹಾಗೂ ವಾಣಿಜ್ಯ ಸಂಸ್ಥೆಗಳು-ಕಾರ್ಮಿಕರು ಇದ್ದರೂ ಇಲ್ಲದಿದ್ದರೂ-ತಪ್ಪದೆ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ನೋಂದಣಿ ಪ್ರಕ್ರಿಯೆಯನ್ನು ಕರ್ನಾಟಕ ಸರ್ಕಾರದ ಇ-ಕಾರ್ಮಿಕ ತಂತ್ರಾಂಶದ ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಪೂರ್ಣಗೊಳಿಸಬೇಕು. ನಿಗದಿತ ಶುಲ್ಕ ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಿ ನೋಂದಣಿ ಪತ್ರ ಪಡೆಯಬೇಕಾಗಿದೆ ಎಂದು ತಿಳಿಸಿದ್ದಾರೆ.

ನೋಂದಣಿ ಪ್ರಕ್ರಿಯೆಗಾಗಿ ಕರ್ನಾಟಕ ಸರ್ಕಾರದ ಇ-ಕಾರ್ಮಿಕ ತಂತ್ರಾಂಶದ ಅಧಿಕೃತ ವೆಬ್‌ಸೈಟ್ https://www.ekarmika.karnataka.gov.in/ekarmika/Static/Home-aspx ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ, ನಿಗದಿತ ಶುಲ್ಕ ಹಾಗೂ ಅಗತ್ಯ ದಾಖಲೆಗಳನ್ನು ಸಲ್ಲಿಸಿ ನೋಂದಣಿ ಪತ್ರ ಪಡೆಯಬೇಕಾಗಿದೆ.

ನಿಯಮಗಳನ್ನು ಪಾಲಿಸದ ಸಂಸ್ಥೆಗಳ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

# ಲೋಕಾಯುಕ್ತ ಅಭಿಯಂತರರ ತಂಡದಿಂದ ಕಳಪೆ ಕಾಮಗಾರಿ ತನಿಖೆ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ರೋಣ ಸನ್ 2021-22ನೇ ಸಾಲಿನ 5054 ಗ್ರಾಮೀಣ ರಸ್ತೆ 80 ಲಕ್ಷ ರೂ, ಅನುದಾನದಲ್ಲಿ ನರೇಗಲ್ಲದಿಂದ ತೊಂಡಿಹಾಳ ರಸ್ತೆ ಸುಧಾರಣೆ ಕಾಮಗಾರಿ ಕಳಪೆಯಾಗಿದೆ ಎಂದು ಆರೋಪಿಸಿ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ ಹಿನ್ನೆಲೆಯಲ್ಲಿ ಮಾ. 23 ರಿಂದ 27 ರ ವರೆಗೂ ಲೋಕಾಯುಕ್ತ ಅಭಿಯಂತರ ತೇಜಸ್ ಎಸ್ ತನಿಖೆ ನಡೆಸಲಿದ್ದಾರೆ ಎಂದು ತಿಳಿದು ಬಂದಿದೆ.

**ಗಜೇಂದ್ರಗಡದಲ್ಲಿ ಸಾಂಸ್ಕೃತಿಕ ಭವನ ಭೂಮಿ ಪೂಜೆ ನೆರವೇರಿಸಿದ ಶಾಸಕ ಜಿ.ಎಸ್. ಪಾಟೀಲ**

# ವೀರಶೈವ-ಲಿಂಗಾಯತ ಒಗ್ಗಟ್ಟೇ ಶಕ್ತಿ!

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುವಾಗ "ನಾವೆಲ್ಲರೂ ವೀರಶೈವರು" ಎಂಬ ಮನೋಭಾವದಿಂದ ಮುಂದುವರಿಯಬೇಕು ಎಂದು ಶಾಸಕ ಜಿ.ಎಸ್. ಪಾಟೀಲ ಹೇಳಿದರು.

ನಗರದ ಕಿತ್ತೂರ ರಾಣಿ ಚನ್ನಮ್ಮ ಸಾಂಸ್ಕೃತಿಕ ಭವನದ ಭೂಮಿ ಪೂಜೆ ಸಮಾರಂಭದಲ್ಲಿ ಮಾತನಾಡಿದ ಅವರು, ಲಿಂಗಾಯತ-ವೀರಶೈವ ಎಂಬ ಬೇರೆ ಬೇರೆ ಪದ ಬಳಕೆ ಮಾಡದೇ, ಒಗ್ಗಟ್ಟಿನಿಂದ ಕೆಲಸ ಮಾಡಬೇಕೆಂದು ಕರೆ ನೀಡಿದರು.

ರಾಜ್ಯದಲ್ಲಿ ಸುಮಾರು 1.60 ಕೋಟಿ ವೀರಶೈವ-ಲಿಂಗಾಯತರು ಇದ್ದರೂ, ಇತ್ತೀಚಿನ ಸಮೀಕ್ಷೆಯಲ್ಲಿ ಈ ಸಂಖ್ಯೆಯನ್ನು ಕೇವಲ 70 ಲಕ್ಷಕ್ಕೆ ಇಳಿಸಿರುವುದು ದುರಂತಕರ ಬೆಳವಣಿಗೆ ಎಂದು ವಿಷಾದಿಸಿದರು. ರಾಜಕೀಯ



ವ್ಯವಸ್ಥೆಯಲ್ಲಿ ವೀರಶೈವ-ಲಿಂಗಾಯತರ ಶಕ್ತಿಯನ್ನು ಹತ್ತಿಕ್ಕುವ ಪ್ರಯತ್ನಗಳು ನಡೆಯುತ್ತಿವೆ ಎಂಬ ಆತಂಕವನ್ನು ವ್ಯಕ್ತಪಡಿಸಿದರು.

12ನೇ ಶತಮಾನದಲ್ಲೇ ಬಸವಣ್ಣನವರು ಲಿಂಗಪೂಜೆ ಮಾಡುವವರನ್ನು ವೀರಶೈವರು ಎಂದು ಗುರುತಿಸಿದ್ದಾರೆ. ಆದ್ದರಿಂದ ಸಮಾಜದ ಇಂದಿನ ಸ್ಥಿತಿಗತಿ ಕುರಿತು ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ ಎಂದರು.

ಪಂಚಮಸಾಲಿ ಮಾತ್ರವಲ್ಲ, ಎಲ್ಲಾ ಉಪಘಟಕಗಳು ಒಂದಾಗಿ ಲಿಂಗಾಯತ ಸಮುದಾಯ ಒಗ್ಗಟ್ಟಾಗಬೇಕು. ಆಗ ರಾಜಕೀಯ ಹಾಗೂ ಸಾಮಾಜಿಕವಾಗಿ ದೊಡ್ಡ ಶಕ್ತಿ ರೂಪುಗೊಳ್ಳುತ್ತದೆ ಎಂದು ಹೇಳಿದರು.

ಸಾಂಸ್ಕೃತಿಕ ಭವನಕ್ಕೆ ಶ್ಲಾಘನೆ ಕಿತ್ತೂರ ರಾಣಿ ಚನ್ನಮ್ಮ ಸಾಂಸ್ಕೃತಿಕ ಭವನ ನಿರ್ಮಾಣದ ನಿರ್ಧಾರ ಶ್ಲಾಘನೀಯ. ಸುಮಾರು ರೂ.2 ಕೋಟಿ ವೆಚ್ಚದಲ್ಲಿ ಕಲ್ಯಾಣ ಮಂಟಪ, ವಸತಿ ಕೊಠಡಿಗಳು, ತೋಟ ಸೇರಿದಂತೆ ಸಮಗ್ರ ಕಟ್ಟಡ ನಿರ್ಮಾಣ ಮಾಡುವ ಯೋಜನೆ ಸಮಾಜದ ಅಭಿವೃದ್ಧಿಗೆ ನೆರವಾಗಲಿದೆ ಎಂದರು.

ಯುವಕರು ಹಾಗೂ ದಾನಿಗಳು ಮುಂದೆ ಬಂದು ಸಹಕಾರ ನೀಡಬೇಕು. ಕಟ್ಟಡ ನಿರ್ಮಾಣಕ್ಕೂ ಮುನ್ನ ಪರಿಸರ ಸಂರಕ್ಷಣೆಗೆ ಸಸಿಗಳನ್ನು ನೆಡುವ ಕಾರ್ಯ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಅಭಿವೃದ್ಧಿಗೆ ರಾಜಕೀಯ ಅಡ್ಡಿಯಾಗಬಾರದು ಅಭಿವೃದ್ಧಿ ಕಾರ್ಯಗಳಿಗೆ ಒಣ ರಾಜಕೀಯ ಅಡ್ಡಿಯಾಗಬಾರದು. ಮತ ಹಾಕಲಿ ಬಿಡಲಿ, ಸಮಾಜ ಸೇವೆಗೆ ಎಲ್ಲರ ಆಶೀರ್ವಾದ ಅಗತ್ಯ ಎಂದು ಹೇಳಿದರು.

ಸಾನಿಧ್ಯ ವಹಿಸಿದ್ದ ಹಾಲಕೆರೆ ಶ್ರೀಮಠದ ಮನಿಪ್ರ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಸಿದ್ದಣ್ಣ ಬಂಡಿ, ಬಸವರಾಜೇಶ್ವರಿ ಚನ್ನು ಪಾಟೀಲ, ವಿಶ್ವನಾಥ ಜಿಡ್ಡಿಬಾಗಿಲ, ನಾಗರಾಜ ಪಾಟೀಲ, ಬಸವರಾಜ ಪಲ್ಲೇದ, ರಮೇಶ್ ಪಲ್ಲೇದ, ಅನೀಲಕುಮಾರ ಪಲ್ಲೇದ, ಮಲ್ಲಿಕಾರ್ಜುನ ಬಿದರೂರ, ಪ್ರಭು ಮೇಟಿ, ಬಸಣ್ಣ ಮೂಲಿಮನಿ, ಬಸಪ್ಪ ಅಕ್ಕಿ, ಮುತ್ತಣ್ಣ ಪಲ್ಲೇದ, ಶಿವಾನಂದ ಗುಗ್ಗರಿ, ಅಶೋಕ ಪವಾಡಶೆಟ್ಟಿ, ಸಂಗಣ್ಣ ಮುದಗಲ್, ಶಿವಪ್ಪ ಅಕ್ಕಿ, ವೀರಪ್ಪ ಚಿನ್ನೂರು, ಚನ್ನಮಲ್ಲಪ್ಪ ಹಳ್ಳದ, ರಾಜು ಬಾಣದ, ಶಾಂತಗೌಡ ಪಾಟೀಲ, ಅಂದಪ್ಪ ಸರ್ವಿ, ಶಂಕ್ರಪ್ಪ ಸರ್ವಿ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

> "ನಾವೆಲ್ಲರೂ ವೀರಶೈವರು ಎಂಬ ಮನೋಭಾವದಿಂದ ಒಂದಾದಾಗ ರಾಜಕೀಯ ಹಾಗೂ ಸಾಮಾಜಿಕವಾಗಿ ಅಘಾತ ಶಕ್ತಿ ರೂಪುಗೊಳ್ಳುತ್ತದೆ"
> – ಶಾಸಕ ಜಿ.ಎಸ್. ಪಾಟೀಲ

**ಕಸಾಪದಿಂದ ಯುಗಾದಿ ವಿಶೇಷ ಕಾರ್ಯಕ್ರಮ**

# ಜನಪದ, ನೃತ್ಯ-ನಾಟಕಗಳ ಮೂಲಕ ಸಂಸ್ಕೃತಿ ಉಳಿಸುವ ಸಂದೇಶ

■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಯಡ್ರಾಮನಹಳ್ಳಿ ಗ್ರಾಮದ ಸಮಾನ ಮನಸ್ಕರ ಸಹಕಾರದೊಂದಿಗೆ ಯುಗಾದಿ ಹಬ್ಬದ ಪ್ರಯುಕ್ತ ಗ್ರಾಮದಲ್ಲಿ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ವಿ.ಬಿ. ಮಲ್ಲೇಶಪ್ಪ



ಅವರು, ಗ್ರಾಮೀಣ ಸೊಗಡಿನ ಜನಪದ ಕಲೆಗಳು, ನೃತ್ಯ ಮತ್ತು ನಾಟಕಗಳನ್ನು ಹಳ್ಳಿಗಳಲ್ಲಿ ಆಯೋಜಿಸುವ ಮೂಲಕ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯವನ್ನು ತಾಲೂಕು ಕಸಾಪ ಬಳಗ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗೂಳಪ್ಪ ಹುಲಿಮನಿ ಅವರು ಮಾತನಾಡಿ, ಗ್ರಾಮದವರ ಸಹಕಾರದಿಂದ ಮರಿಯಮ್ಮನಹಳ್ಳಿ ಕಲಾವಿದರನ್ನು ಆಹ್ವಾನಿಸಿ ಜನಪದ, ನೃತ್ಯ ಹಾಗೂ 'ರೈತರ ಧ್ವನಿ' ಎಂಬ ಕಿರು ನಾಟಕ ಪ್ರದರ್ಶಿಸಲಾಯಿತು. ಈ ಸಂದರ್ಭದಲ್ಲಿ ಗಣ್ಯರು ಮತ್ತು ಸಹಕರಿಸಿದ ಮಹನೀಯರನ್ನು ಸನ್ಮಾನಿಸಲಾಯಿತು. ಇಂತಹ ಕಾರ್ಯಕ್ರಮಗಳು ಗ್ರಾಮಗಳಲ್ಲಿ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಬೆಳೆಸುವುದರೊಂದಿಗೆ ಕಲಾವಿದರನ್ನು ಪ್ರೋತ್ಸಾಹಿಸುವುದಲ್ಲದೆ, ಮುಂದಿನ ಪೀಳಿಗೆಗೆ ಸಂಸ್ಕೃತಿಯನ್ನು ರವಾನಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಶಿವರಾಮಪ್ಪ, ಜಗದೀಶ, ಕುರಿ ಮುದುಕಪ್ಪ, ಉಮೇಶ, ವೀರೇಶ, ಮಹಾದೇವಪ್ಪ, ವೀರಣ್ಣ, ಶಿವಮೂರ್ತೆಪ್ಪ, ಕೊಟ್ರಗೌಡ, ಬಸವರಾಜ, ಕೊಟ್ರಪ್ಪ, ಸಂಗಪ್ಪ, ಪ್ರಶಾಂತ, ಹನ್ಮಂತಪ್ಪ, ನಾಗೇಂದ್ರ, ಕೊಟ್ರೇಶ, ದುರುಗಪ್ಪ, ಮರಿಯಪ್ಪ, ಅಂಬ್ರೇಶಪ್ಪ, ದೇವಪ್ಪ, ಶಿವಪ್ಪ, ಹುಳ್ಳಿ ಹುಲುಗಪ್ಪ, ಎಸ್.ವಿ. ಪಾಟೀಲ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಸಾಪದ ಕಾರ್ಯದರ್ಶಿ ಹಾಗೂ ಖಜಾಂಚಿಗಳಾದ ಮಾರುತಿ ಮತ್ತು ಪ್ರಹ್ಲಾದ ಕಾರ್ಯಕ್ರಮ ನಿರ್ವಹಿಸಿದರು.

**ಶ್ರೀ ಗಂಜಿ ಬಸವೇಶ್ವರ ದೇವಸ್ಥಾನದ ರಥೋತ್ಸವದ ಅಂಗವಾಗಿ**

# ತೇರಿನ ಗಾಲಿಗೆ ಪೂಜೆ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಉಸುಗಿನಕಟ್ಟಿ ಓಣಿಯ ಶ್ರೀ ಗಂಜಿ ಬಸವೇಶ್ವರ ದೇವಸ್ಥಾನದ 64ನೇ ವರ್ಷದ ರಥೋತ್ಸವದ ಅಂಗವಾಗಿ ಯುಗಾದಿ ಪಾಡ್ಯದಂದು ತೇರಿನ ಗಾಲಿ ಪೂಜೆ ಕಾರ್ಯಕ್ರಮವು ಜರುಗಿತು.

ಕಾಯಕ್ರಮದಲ್ಲಿ ಜಾತ್ರಾ ಕಮಿಟಿಯ ಅಧ್ಯಕ್ಷ ಪ್ರಶಾಂತ ಶಾಬಾದಿಮಠ ಅವರು ತೇರಿನ ಗಾಲಿಗೆ ಪೂಜೆ ಸಲ್ಲಿಸಿದರು.

ಮುಖಂಡರಾದ ನಿಂಗಪ್ಪ ಪಡಗದ, ವೀರನಗೌಡ ಮರಿಗೌಡರ, ಸಿದ್ದರಾಮಪ್ಪ ಹುಂಬಿ, ಮಂಜುನಾಥ ಲಕ್ಕುಂಡಿ, ತೋಟಯ್ಯ ವಿಭೂತಿಮಠ, ಸೋಮಣ್ಣ ಪುರದ, ಶಂಕರ ಕರಬಿಷ್ಟಿ, ಸಿದ್ದಲಿಂಗೇಶ ಸಂಗನಾಳ, ಪ್ರಶಾಂತ ಮುದೇಗೌನವರ, ಮಹೇಶ ಶಾಬಾದಿಮಠ, ಹನುಮಂತಪ್ಪ ಮುಂಡರಗಿ, ಕರಬಸಯ್ಯ ನಾಲತ್ವಾಡಮಠ, ಬಸಪ್ಪ ಪಡಗದ, ಈರಣ್ಣ ಕರಬಿಷ್ಟಿ, ಎಫ್.ವಿ. ಮರಿಗೌಡರ, ಪರಪ್ಪ ಕಮತರ, ಎಚ್.ಕೆ. ಮುಲ್ಲಾ, ಹುಚ್ಚಪ್ಪ ಐಹೊಳ್ಳಿ ಹಾಗೂ ಓಣಿಯ ಗುರು-ಹಿರಿಯರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

**ಎರಡನೇ ವರ್ಷದ ಸೇವಾ ಕಾರ್ಯಕ್ಕೆ ಚಾಲನೆ – ಬೇಸಿಗೆಯಲ್ಲಿ ದಾಹ ತಣಿಸುವ ಮಾನವೀಯ ಪ್ರಯತ್ನ!**

# ವಿಶ್ವ ಜಲ ದಿನಾಚರಣೆ: ನೀರಿನ ಅರವಟ್ಟಿಗೆ ಆರಂಭ

■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ತಾಲೂಕಿನ ಹಂಪಾಪಟ್ಟಣ ಗ್ರಾಮದಲ್ಲಿ ವಿಶ್ವ ಜಲ ದಿನಾಚರಣೆ ಅಂಗವಾಗಿ ಶ್ರೀ ನಗರೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಎರಡನೇ ವರ್ಷದ "ನೀರಿನ ಅರವಟ್ಟಿಗೆ"ಯನ್ನು ಭಾನುವಾರ ಪ್ರಾರಂಭಿಸಲಾಯಿತು.

ಗ್ರಾಮದ ಹಿರಿಯ ಮುಖಂಡರಾದ ಗೆದ್ದಲಗಟ್ಟಿ ತಿಮ್ಮಣ್ಣ ಹಾಗೂ ಸೈನಿಕ ಭೈರವ ಪತ್ತಾರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗೆದ್ದಲಗಟ್ಟಿ ತಿಮ್ಮಣ್ಣ, ಬೇಸಿಗೆಯ ತೀವ್ರ ಬಿಸಿಲಿನಲ್ಲಿ ನೀರಿನ ಅಗತ್ಯತೆ ಅತ್ಯಂತ ಮಹತ್ವದ್ದಾಗಿದ್ದು, ನೀರಿನ ಅರವಟ್ಟಿಗೆ ಮೂಲಕ ಜನರ ದಾಹ ತಣಿಸುವುದು ಮಹತ್ತರ ಸೇವೆ ಎಂದು ಹೇಳಿದರು. ಮಾತಾ ಸೇವಾ ಟ್ರಸ್ಟ್ ಕೈಗೊಂಡಿರುವ ಈ ಕಾರ್ಯ ಶ್ಲಾಘನೀಯವಾಗಿದ್ದು, ಹಂಪಾಪಟ್ಟಣದಲ್ಲಿ ಸುಸಜ್ಜಿತ ಆಸ್ಪತ್ರೆ ನಿರ್ಮಾಣವಾಗಬೇಕು ಎಂಬ ಆಶಯವನ್ನೂ ವ್ಯಕ್ತಪಡಿಸಿದರು.



ಮಾತಾ ಸೇವಾ ಟ್ರಸ್ಟ್ ಅಧ್ಯಕ್ಷ ಜಿ. ಶ್ರೀನಿವಾಸ ಮಾತನಾಡಿ, ವಿಶ್ವ ಜಲ ದಿನದ ಮಹತ್ವವನ್ನು ವಿವರಿಸಿ, ನೀರು ಜೀವನದ ಮೂಲವಾಗಿದ್ದು ಅದನ್ನು ಸಂರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ಹೇಳಿದರು.

ಬೇಸಿಗೆ ಕಾಲದಲ್ಲಿ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಈ ಅರವಟ್ಟಿಗೆ ಆರಂಭಿಸಲಾಗಿದೆ ಎಂದು ತಿಳಿಸಿದರು. ಮುಂದೆಯೂ ಇಂತಹ ಸೇವಾ ಕಾರ್ಯಗಳನ್ನು ಮುಂದುವರಿಸಲು ಜನರ ಸಹಕಾರ ಅಗತ್ಯವಿದೆ ಎಂದು ಮನವಿ ಮಾಡಿದರು.

ಉಮೇಶ್ ಮಣಿಗಾರ್ ಮಾತನಾಡಿ, ಬಿಸಿಲಿನ ತಾಪಮಾನ ಹೆಚ್ಚಾಗಿರುವ ಸಂದರ್ಭದಲ್ಲಿ ನೀರಿನ ಅರವಟ್ಟಿಗೆ ಪ್ರಾರಂಭಿಸಿರುವುದು ಅತ್ಯಂತ ಉಪಯುಕ್ತ ಕಾರ್ಯವಾಗಿದ್ದು, ಬಾಯಾರಿದವರಿಗೆ ನೀರು ನೀಡುವುದು ನಿಜವಾದ ಮಾನವೀಯತೆ ಎಂದರು.

ರೈತ ಮುಖಂಡ ಸೀಗೆನಹಳ್ಳಿ ಬಸವರಾಜ್ ಮಾತನಾಡಿ, ಸಮಾಜ ಸೇವೆಯಲ್ಲಿ ತೊಡಗಿರುವ ಕಾರ್ಯಕರ್ತರು ನೀರಿನ ಅರವಟ್ಟಿಗೆ ಮೂಲಕ ಮತ್ತೊಂದು ಮಹತ್ವದ ಸೇವೆ ಸಲ್ಲಿಸಿದ್ದಾರೆ ಎಂದು ಪ್ರಶಂಸಿಸಿದರು.

ಮುಖಂಡ ಸಿ. ನಾಗರಾಜ್ ಮಾತನಾಡಿ, ಇಂತಹ ಕಾರ್ಯಕ್ರಮಗಳು ಸಮಾಜಕ್ಕೆ ಮಾದರಿಯಾಗಿದ್ದು, ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ಕಾರ್ಯಗಳೂ ವಿಶೇಷತೆ ಹೊಂದಿವೆ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಎ. ಕೇಶವಮೂರ್ತಿ, ಹಡಗಲಿ ಖಾಜಾಸಾಬ್, ಗವಿರಾಜ್ ಕೆ.ಎಸ್., ಹುಲುಗಪ್ಪ, ಸತ್ಯನಾರಾಯಣ, ಟಿ. ನಾಗೇಶ್, ಬಿ.ಎಸ್. ಹನುಮಂತಣ್ಣ, ಗೊಂದಲಿ ರಾಘವೇಂದ್ರ, ಮರಿಸ್ವಾಮಿ, ಬೇಕರಿ ಸಂಜಯ್, ಟಿ. ರಾಘವೇಂದ್ರ, ಟಿ. ರಾಜು, ಸೋಮು ವಾಲ್ಮೀಕಿ ಸೇರಿದಂತೆ ಅನೇಕ ಗ್ರಾಮಸ್ಥರು ಹಾಗೂ ಮುಖಂಡರು ಭಾಗವಹಿಸಿದ್ದರು.

**ನೀರೇ ಜೀವ : ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ**

ವಿಶ್ವ ಜಲ ದಿನದ ಅಂಗವಾಗಿ ಆಯೋಜಿಸಲಾದ ಈ ನೀರಿನ ಅರವಟ್ಟಿಗೆ, ಬೇಸಿಗೆಯಲ್ಲಿ ಸಾರ್ವಜನಿಕರ ದಾಹ ತಣಿಸುವುದರ ಜೊತೆಗೆ ನೀರಿನ ಮಹತ್ವವನ್ನು ಜನರಿಗೆ ತಿಳಿಸುವ ಕಾರ್ಯವನ್ನೂ ಮಾಡುತ್ತಿದೆ.

**ಹಿಂದೂ-ಮುಸ್ಲಿಂ ಬಾಂಧವರಿಂದ ಒಗ್ಗಟ್ಟಿನ ಆಚರಣೆ : ಬೇವು-ಬೆಲ್ಲ ಸೇವನೆ, ಶುಭಾಶಯ ವಿನಿಮಯ!**


# ನಂದಿಪುರದಲ್ಲಿ ಯುಗಾದಿ-ರಂಜಾನ್ ಸೌಹಾರ್ದ ಸಂಭ್ರಮ!

■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ತಾಲೂಕಿನ ನಂದಿಪುರ ಪುಣ್ಯಕ್ಷೇತ್ರದಲ್ಲಿ ಯುಗಾದಿ ಹಾಗೂ ರಂಜಾನ್ ಹಬ್ಬದ ಅಂಗವಾಗಿ ಸೌಹಾರ್ದತೆಯ ಚಂದ್ರದರ್ಶನ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು. ಗ್ರಾಮದ ಬಸ್ ನಿಲ್ದಾಣದ ಸಮೀಪ ಇರುವ ಶ್ರೀ ಆಂಜನೇಯ ಸ್ವಾಮಿ ದೇವಾಲಯದ ಆವರಣದಲ್ಲಿ ಈ ವಿಶೇಷ ಆಚರಣೆ ನಡೆಯಿತು.

ಗ್ರಾಮದ ಹಿಂದೂ ಹಾಗೂ ಮುಸ್ಲಿಂ ಬಾಂಧವರು ಒಂದಾಗಿ ಸೇರಿ ಸಾಯಂಕಾಲ ಚಂದ್ರದರ್ಶನ ಮಾಡಿ ಹಬ್ಬದ ಸಂಭ್ರಮವನ್ನು ಹಂಚಿಕೊಂಡರು. ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು, ಸಮಾಜದಲ್ಲಿ ಏಕತೆ ಮತ್ತು ಭ್ರಾತೃತ್ವದ ಸಂದೇಶವನ್ನು ಸಾರಿದರು.

ಯುಗಾದಿಯ ಸಂಕೇತವಾದ ಬೇವು-ಬೆಲ್ಲ ಸೇವನೆಯ ಮೂಲಕ ಜೀವನದ ಕಹಿ-ಸಿಹಿ ಅನುಭವಗಳನ್ನು ಸಮಾನವಾಗಿ ಸ್ವೀಕರಿಸುವ ಮಹತ್ವವನ್ನು ವಿವರಿಸಲಾಯಿತು. ಇದೇ ವೇಳೆ



ರಂಜಾನ್ ಹಬ್ಬದ ಪಾವಿತ್ರ್ಯವು ಸಹ ಸಹನೆ, ಶಾಂತಿ ಮತ್ತು ಸಹಬಾಳ್ವೆಯ ಮೌಲ್ಯಗಳನ್ನು ಪ್ರತಿಬಿಂಬಿಸಿತು.

ಈ ಸಂದರ್ಭದಲ್ಲಿ ಮೌಲಾನ ಸಿರಾಜುದ್ದೀನ್, ಪಿ. ನಬೀ ಸಾಹೇಬ್, ಆರ್. ಚಾಂದ್ ಬಾಷಾ, ಅಬ್ದುಲ್ ವಾಹಿದ್, ಹೆಚ್. ಕಾಸಿಮ್‌ಸಾಹೇಬ್, ಹೆಚ್. ರಾಜಾಸಾಹೇಬ್, ಪಿ. ರಹಿಮಾನ್, ಎಂ.ಡಿ. ಬಸವನಗೌಡ, ಬಿ. ದೇವರೆಡ್ಡಿ, ಹೆಚ್.ಎಸ್. ದೊಡ್ಡ ಬಸವರೆಡ್ಡಿ, ಬಣಕಾರ ದೊಡ್ಡ ಬಸಪ್ಪ, ಹೆಚ್.ಎಂ. ಗುರುಬಸವರಾಜಯ್ಯ, ಬಿ.ಎಂ. ಗುರುಲಿಂಗಯ್ಯ, ಎಸ್.ಎಂ. ಪರಮೇಶ್ವರಯ್ಯ, ಉ. ಬಸವರಾಜ, ಎಂ. ನಾಗರಾಜ, ಎಸ್.ಎಂ. ತಿಪ್ಪಯ್ಯ, ಮೈನಳ್ಳಿ ದೊಡ್ಡ ಬಸವರೆಡ್ಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಗ್ರಾಮದ ಹಿರಿಯರು, ಯುವಕರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರುಗು ನೀಡಿದರು. ನಂದಿಪುರದಲ್ಲಿ ನಡೆದ ಈ ವಿಶೇಷ ಆಚರಣೆ ಸಮಾಜದಲ್ಲಿ ಸೌಹಾರ್ದತೆ ಮತ್ತು ಏಕತೆಯ ಆದರ್ಶವಾಗಿ ಗಮನ ಸೆಳೆಯಿತು.

# ಸಾವಿರಾರು ಭಕ್ತರ ನಡುವೆ ಸಂಭ್ರಮದ ರಥೋತ್ಸವ!

■ವಿಜಯಸಾಕ್ಷಿ ಸುದ್ದಿ, ಗದಗ



ಭಕ್ತಿ ಭಾವದಲ್ಲಿ ಮುಳುಗಿದ ಪವಿತ್ರ ವಾತಾವರಣದಲ್ಲಿ ಶ್ರೀ ಮಾರುತೇಶ್ವರ ಜಾತ್ರಾ ಮಹೋತ್ಸವದ ಮಹಾ ರಥೋತ್ಸವ ಸಡಗರ-ಸಂಭ್ರಮದಿಂದ ಜರಗಿತು. ಸಾವಿರಾರು ಭಕ್ತರು ಶ್ರದ್ಧಾ ಭಕ್ತಿಯಿಂದ ರಥೋತ್ಸವದಲ್ಲಿ ಪಾಲ್ಗೊಂಡು ತಮ್ಮ ಭಕ್ತಿಭಾವವನ್ನು ವ್ಯಕ್ತಪಡಿಸಿದರು.

ದೇವಸ್ಥಾನವು ಚಿನ್ನ-ಬೆಳ್ಳಿ ಆಭರಣಗಳು, ಬಣ್ಣಬಣ್ಣದ ವಿದ್ಯುತ್ ದೀಪಗಳು ಹಾಗೂ ಹೂಮಾಲೆಗಳಿಂದ ಅಲಂಕೃತಗೊಂಡು ಕಂಗೊಳಿಸಿತು. ದೇವರ ದರ್ಶನಕ್ಕಾಗಿ ಭಕ್ತರು ಸಾಲುಗಟ್ಟಿ ನಿಂತ ದೃಶ್ಯ ಗಮನಸೆಳೆಯಿತು.

ಮಹಾ ರಥೋತ್ಸವದ ವೇಳೆ ಡೊಳ್ಳಿನ ಮೇಳ, ಜಾಂಜ್ ಮೇಳ ಹಾಗೂ ಗೊಂಬೆಗಳ ಕುಣಿತ ಪ್ರದರ್ಶನಗಳು ಭಕ್ತರನ್ನು ಮಂತ್ರಮುಗ್ಧರನ್ನಾಗಿಸಿತು. ರಥವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸುವಾಗ ಭಕ್ತರು ಬಾಳೆಹಣ್ಣು, ಹಣ್ಣುಗಳು ಮತ್ತು ಪುಷ್ಪಗಳನ್ನು ಅರ್ಪಿಸಿ, "ಗೋವಿಂದಾ ಗೋವಿಂದ, ಹರ ಹರ ಮಹಾದೇವ, ಮಾರುತೇಶ್ವರ ಮಹಾರಾಜಕಿ ಜೈ!" ಎಂದು ಘೋಷಣೆ ಕೂಗಿ ಭಕ್ತಿ ಭಾವವನ್ನು ವ್ಯಕ್ತಪಡಿಸಿದರು.

ರಥವು ದೇವಸ್ಥಾನದ ಪಾದಗಟ್ಟಿ ತಲುಪಿದ ನಂತರ ಬಣ್ಣಬಣ್ಣದ ಸಿಡಿಮದ್ದುಗಳನ್ನು ಸಿಡಿಸಿ ಭಕ್ತರು ಸಂಭ್ರಮಾಚರಣೆ ನಡೆಸಿದರು. ಉತ್ಸವವು ಭಕ್ತಿಭಾವ ಮತ್ತು ಸಾಂಸ್ಕೃತಿಕ ವೈಭವದ ಮೆರಗು ತೋರಿಸಿತು.

# ಮಾ. 26ರಂದು ಮಹಿಳೆಯರಿಗೆ ನಿಬಂಧ, ವೇಷಭೂಷಣ ಸ್ಪರ್ಧೆ

■ ವಿಜಯಸಾಕ್ಷಿ ಸುದ್ದಿ, ಗದಗ




ಎಸ್.ವಾಯ್.ಬಿ.ಎಂ.ಎಸ್. ಯೋಗಪಾಠಶಾಲೆಯ ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರ, ಸಿದ್ಧಲಿಂಗ ನಗರ ಗದಗ ಸಂಸ್ಥೆಯವರು 17ನೇ ವಾರ್ಷಿಕೋತ್ಸವ ಮತ್ತು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರಿಗಾಗಿ ಗದಗ ಜಿಲ್ಲಾ ಮಟ್ಟದ ನಿಬಂಧ ಮತ್ತು ವೇಷಭೂಷಣ ಸ್ಪರ್ಧೆಗಳನ್ನು ಆಯೋಜಿಸಿದ್ದಾರೆ.

ಸ್ಪರ್ಧೆಗಳು ದಿನಾಂಕ 26-3-2026 ಗುರುವಾರ ಬೆಳಗ್ಗೆ 11-30ಕ್ಕೆ ಸಿದ್ಧಲಿಂಗ ನಗರದಲ್ಲಿನ ಬಸವ ಪ್ರಭೆ ಕ್ಯಾಂಪಸ್ (ಬಸವೇಶ್ವರ ಶಾಲೆ ಆವರಣ) ದಲ್ಲಿ ಜರುಗಲಿವೆ.

ನಿಬಂಧ ಸ್ಪರ್ಧೆಯ ವಿಷಯ– "ಮಹಿಳೆಯರಿಗೆ ಯೋಗಾಭ್ಯಾಸದ ಅಗತ್ಯತೆ". ಸಮಯ 45 ನಿಮಿಷ, ಭಾಷೆ ಕನ್ನಡ, ನಿಗದಿತ ಸ್ಥಳದಲ್ಲಿ ಕುಳಿತು ಬರೆಯಬೇಕು. ವಯೋಮಿತಿ 18 ವರ್ಷ ಮೇಲ್ಪಟ್ಟ ಮಹಿಳೆಯರು.

ವೇಷಭೂಷಣ ಸ್ಪರ್ಧೆಯ ವಿಷಯ– "ವೀರ, ಶೂರ, ಧೀರ, ಧೀಮಂತ, ಆದರ್ಶ ಮಹಿಳೆಯರ ವೇಷಧಾರಣೆ". ಸಮಯ: 2 ರಿಂದ 5 ನಿಮಿಷ. ಪ್ರದರ್ಶನ ವೇಳೆಯಲ್ಲಿ ತಮ್ಮ ವೇಷಭೂಷಣ ಕುರಿತು ಮಾತನಾಡಬೇಕು. ವಯೋಮಿತಿ ನಿರ್ಬಂಧವಿರುವುದಿಲ್ಲ.

ಸ್ಪರ್ಧೆಗಳಲ್ಲಿ ಭಾಗವಹಿಸಿದವರಿಗೆ ಪ್ರಮಾಣ ಪತ್ರ ಮತ್ತು ವಿಜೇತರಾದವರಿಗೆ ನಗದು ಬಹುಮಾನ. (ಪ್ರಥಮ – ರೂ. 500/–, ದ್ವಿತೀಯ – ರೂ. 300/–, ತೃತೀಯ – ರೂ. 200/–) ನೀಡಲಾಗುವುದು. ಸ್ಪರ್ಧೆಗಳಲ್ಲಿ ಭಾಗವಹಿಸಲು ಗದಗ ಜಿಲ್ಲೆಯವರು ಮತ್ತು ಗದಗ ಜಿಲ್ಲೆಯಲ್ಲಿನ ಕಾಲೇಜು ವಿದ್ಯಾರ್ಥಿನಿಯರಿಗೆ ಅವಕಾಶವಿದೆ. ಪ್ರವೇಶ ಉಚಿತವಾಗಿರುವುದು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕ ದೂರವಾಣಿ ಸಂಖ್ಯೆ: 9448317188, 9481013270, 8553870605. ಸ್ಪರ್ಧೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಸಂಘಟಕರ ಪರವಾಗಿ ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರದ ಕಾರ್ಯದರ್ಶಿ ಸುಲೋಚನಾ ಐಹೊಳ್ಳಿ ವಿನಂತಿಸಿದ್ದಾರೆ.

### ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ಮಾರಕ ನಿಯಮ ಕೈಬಿಡಲು ಆಗ್ರಹ : ಮಾ. 25ರಂದು ಮುಖ್ಯಮಂತ್ರಿಗೆ ಮನವಿ

# ಹೊಸ ಜಾಹೀರಾತು ನೀತಿಗೆ ಸಂಪಾದಕರ ಸಂಘದ ತೀವ್ರ ವಿರೋಧ



■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಕರ್ನಾಟಕ ಜಾಹೀರಾತು ನೀತಿ–2026 ವಿರುದ್ಧ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘ ತೀವ್ರ ವಿರೋಧ ವ್ಯಕ್ತಪಡಿಸಿದೆ.

ನಗರದ ಪ್ರವಾಸಿ ಮಂದಿರದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಎ.ಸಿ. ತಿಪ್ಪೇಸ್ವಾಮಿ, ಹೊಸ ನೀತಿಯಲ್ಲಿ ಜಿಲ್ಲಾ ಹಾಗೂ ಪ್ರಾದೇಶಿಕ ಪತ್ರಿಕೆಗಳ ಬೆಳವಣಿಗೆಗೆ ಅಡ್ಡಿಯಾಗುವ ಹಲವು ನಿಯಮಗಳನ್ನು ಸೇರಿಸಲಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

2013ರ ಜಾಹೀರಾತು ನೀತಿ ಹಾಗೂ 2014ರ ಅನುಷ್ಠಾನ ನಿಯಮಗಳಡಿ ಈಗಾಗಲೇ 700ಕ್ಕೂ ಹೆಚ್ಚು ಪತ್ರಿಕೆಗಳು ಮಾಧ್ಯಮ ಪಟ್ಟಿಯಲ್ಲಿ

> "ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ಬೆಂಬಲ ನೀಡಬೇಕಾದ ಸರ್ಕಾರ, ಅವುಗಳನ್ನು ಮುಚ್ಚುವ ಪರಿಸ್ಥಿತಿ ಸೃಷ್ಟಿಸುವಂತ ನಿಯಮಗಳನ್ನು ಜಾರಿಗೆ ತರುತ್ತಿದೆ. ಇಂತಹ ಮಾರಕ ನಿಯಮಗಳನ್ನು ತಕ್ಷಣ ಕೈಬಿಡಬೇಕು."
>
> **– ಎ.ಸಿ. ತಿಪ್ಪೇಸ್ವಾಮಿ, ರಾಜ್ಯಾಧ್ಯಕ್ಷರು**

ಸೇರಿದ್ದು, ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಆದರೆ, ಹೊಸ ನೀತಿಯಲ್ಲಿ ಕಠಿಣ ನಿಯಮಗಳನ್ನು ಜಾರಿಗೆ ತರುವ ಮೂಲಕ ಪತ್ರಿಕೆಗಳ ಉಳಿವಿನ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಹೇಳಿದರು.

ಹೊಸ ಜಾಹೀರಾತು ನೀತಿ ಇನ್ನೂ ಅಧಿಕೃತವಾಗಿ ಜಾರಿಗೆ ಬಂದಿಲ್ಲದಿದ್ದರೂ, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಕರಡು ಪ್ರತಿಯಲ್ಲಿ ಹಲವಾರು ಮಾರಕ ಅಂಶಗಳಿರುವುದು ಗೋಚರಿಸುತ್ತದೆ ಎಂದು ಹೇಳಿದರು.

ಮಾರಕ ನಿಯಮಗಳನ್ನು ಕೈಬಿಡುವಂತೆ ಆಗ್ರಹಿಸಿ, ಮಾರ್ಚ್ 25ರಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿ, ಇಲಾಖೆಯ ಕಾರ್ಯದರ್ಶಿ ಹಾಗೂ ಆಯುಕ್ತರಿಗೆ ಸಂಘದ ವತಿಯಿಂದ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷರಾದ ಮಂಜುನಾಥ ಬಸಪ್ಪ ಅಬ್ಬಿಗೇರಿ, ಭೀಮರಾಯ ಹದ್ದಿನಾಳ, ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಹರೀಶ್, ಖಜಾಂಚಿ ಟಿ.ಎಸ್. ಕೃಷ್ಣಮೂರ್ತಿ, ಕಾರ್ಯದರ್ಶಿ ಎಸ್.ಟಿ. ವೇದಮೂರ್ತಿ, ಜಂಟಿ ಕಾರ್ಯದರ್ಶಿ ಬಿ. ದಿನೇಶ್ ಗೌಡಗೆರೆ, ಹೆಚ್. ರಂಗಣ್ಣ, ಗದಗ ಜಿಲ್ಲಾ ಅಧ್ಯಕ್ಷ ಜಗದೀಶ ಎಸ್.ಪಿ, ರವಿಕಾಂತ್ ಅಂಗಡಿ, ಎನ್.ಆರ್. ಬಾಂಡಗೆ, ರಮೇಶ್ ಭಜಂತ್ರಿ ಸೇರಿದಂತೆ ವಿವಿಧ ಜಿಲ್ಲಾ ಘಟಕಗಳ ಅಧ್ಯಕ್ಷರು ಉಪಸ್ಥಿತರಿದ್ದರು.


**ಸಂಘದ ಪ್ರಮುಖ ಆಗ್ರಹಗಳು**

1. 'Sunset Clause' (ಸ್ವಯಂಚಾಲಿತ ಮುಕ್ತಾಯ) ನಿಯಮ ರದ್ದುಪಡಿಸಬೇಕು
2. ಪ್ರತಿ 2 ವರ್ಷಕ್ಕೊಮ್ಮೆ ದಾಖಲೆ ಪರಿಶೀಲನೆ ಆಧಾರಿತ ನಿಯಮ ಕೈಬಿಡಬೇಕು
3. ಜಾಹೀರಾತು ದರವನ್ನು ಶೇ.12ರಷ್ಟು ನಿಯಮಿತವಾಗಿ ಹೆಚ್ಚಿಸಲು ಅವಕಾಶ ನೀಡಬೇಕು
4. ಪ್ರಾದೇಶಿಕ ಪತ್ರಿಕೆಗಳನ್ನು A/B ವರ್ಗವಾಗಿ ವಿಭಜಿಸಬಾರದು
5. PF/ESI ಹಾಗೂ ಕನಿಷ್ಠ ನೌಕರರ ಕಡ್ಡಾಯ ನಿಯಮ ಕೈಬಿಡಬೇಕು
6. ಮಾಲೀಕತ್ವ ಬದಲಾದರೂ ಮಾಧ್ಯಮ ಪಟ್ಟಿಯಿಂದ ಹೊರಹಾಕಬಾರದು
7. ಏಜೆನ್ಸಿಗಳ 15% ಕಮಿಷನ್ ಪದ್ಧತಿ ರದ್ದುಪಡಿಸಬೇಕು
8. SC/ST, OBC ಸೇರಿದಂತೆ ಎಲ್ಲ ಸಮುದಾಯ ಪತ್ರಿಕೆಗಳಿಗೆ ಪ್ರೋತ್ಸಾಹ ಜಾಹೀರಾತು ಮುಂದುವರಿಸಬೇಕು
9. ಒಂದೇ ಕುಟುಂಬದ ಪತ್ರಿಕೆಗಳಿಗೆ ನಿರ್ಬಂಧ ವಿಧಿಸುವ ನಿಯಮ ಕೈಬಿಡಬೇಕು
10. ಗಡಿಭಾಗ ಪತ್ರಿಕೆಗಳಿಗೆ ಇರುವ ಸೌಲಭ್ಯಗಳನ್ನು ಮುಂದುವರಿಸಬೇಕು.

### 4.50 ಕೋಟಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದ ಶಾಸಕ ಜಿ.ಎಸ್. ಪಾಟೀಲ

# ಪುರಾತನ ದೇವಸ್ಥಾನಗಳ ಸಂರಕ್ಷಣೆ ನಮ್ಮ ಕರ್ತವ್ಯ





■ ವಿಜಯಸಾಕ್ಷಿ ಸುದ್ದಿ, ರೋಣ

ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡ ರೋಣ ಪಟ್ಟಣದ ಐತಿಹಾಸಿಕ ದೇವಸ್ಥಾನಗಳಿಗೆ ಮರುಜೀವ ನೀಡುವ ಮಹತ್ವದ ಯೋಜನೆಗೆ ಚಾಲನೆ ನೀಡಲಾಗಿದೆ. ಒಟ್ಟು ರೂ.4 ಕೋಟಿ 50 ಲಕ್ಷ ವೆಚ್ಚದಲ್ಲಿ ಮೂರು ಪ್ರಮುಖ ದೇವಸ್ಥಾನಗಳ ಸಂರಕ್ಷಣಾ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಲಾಯಿತು ಎಂದು ರಾಜ್ಯ ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಶಾಸಕ ಜಿ.ಎಸ್. ಪಾಟೀಲ ತಿಳಿಸಿದರು.

ಪ್ರವಾಸೋದ್ಯಮ, ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಸಹಯೋಗದಲ್ಲಿ ರಾಮಲಿಂಗೇಶ್ವರ ದೇವಸ್ಥಾನ, ಈಶ್ವರ ದೇವಸ್ಥಾನ, ಕಲ್ಯಾಣಿ ಹಾಗೂ ಅನಂತಶಯನ ದೇವಸ್ಥಾನದ ಸಂರಕ್ಷಣಾ ಕಾರ್ಯಗಳಿಗೆ ಚಾಲನೆ ನೀಡಿದ ನಂತರ ಮಾತನಾಡಿದ ಅವರು, ರೋಣ ಪಟ್ಟಣವು ಚಾಲುಕ್ಯರ ಕಾಲದಲ್ಲಿ 'ದ್ರೋಣಾಪುರ' ಎಂದು ಪ್ರಸಿದ್ಧಿಯಾಗಿತ್ತು ಎಂದು ಹೇಳಿದರು.

ಪಟ್ಟಣದಲ್ಲಿ ಒಟ್ಟು 11 ಪುರಾತನ ದೇವಸ್ಥಾನಗಳಿದ್ದು, ಅವುಗಳ ಸಂರಕ್ಷಣೆ ನಮ್ಮ ಕರ್ತವ್ಯವಾಗಿದೆ. ಮೊದಲ ಹಂತದಲ್ಲಿ ಮೂರು ದೇವಸ್ಥಾನಗಳಿಗೆ ತಲಾ ರೂ.1 ಕೋಟಿ 50 ಲಕ್ಷ ಅನುದಾನ ನೀಡಲಾಗಿದ್ದು, ಅವುಗಳನ್ನು ಚಾಲುಕ್ಯರ ಕಾಲದ ಮೂಲ ಶೈಲಿಗೆ ಸಮೀಪವಾಗುವಂತೆ ಮರು ರೂಪಿಸಲಾಗುತ್ತದೆ ಎಂದು ತಿಳಿಸಿದರು.

ಇನ್ನುಳಿದ ದೇವಸ್ಥಾನಗಳ ಸಂರಕ್ಷಣಾ ಕಾಮಗಾರಿಗಳನ್ನೂ ಹಂತ ಹಂತವಾಗಿ ಆರಂಭಿಸಲಾಗುವುದು. ರೋಣ ಪಟ್ಟಣವನ್ನು ಆಕರ್ಷಕ ಪ್ರವಾಸಿ ತಾಣವನ್ನಾಗಿ ರೂಪಿಸಲು ಸಮಗ್ರ ಯೋಜನೆ ಸಿದ್ಧವಾಗಿದ್ದು, ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ ಎಂದರು.

ಪಟ್ಟಣದ ಅಭಿವೃದ್ಧಿಗೆ ಸಂಬಂಧಿಸಿದಂತೆ ಈಗಾಗಲೇ ಕೆರೆಯ ಅಭಿವೃದ್ಧಿಗೆ ರೂ 2 ಕೋಟಿ ಅನುದಾನ ನೀಡಲಾಗಿದ್ದು, ಮತ್ತಷ್ಟು ರೂ. 2 ಕೋಟಿ ಬಿಡುಗಡೆಗೊಂಡಿದೆ. ಇದರಿಂದ ಆ ಪ್ರದೇಶವನ್ನು ಸುಂದರ ಹಾಗೂ ಆಕರ್ಷಕ ತಾಣವನ್ನಾಗಿ ರೂಪಿಸಲಾಗುತ್ತದೆ ಎಂದು ಹೇಳಿದರು.


ಇದೇ ವೇಳೆ ಶಿಕ್ಷಣ ಮತ್ತು ಸಾಮಾಜಿಕ ಮೂಲಸೌಕರ್ಯಗಳ ಅಭಿವೃದ್ಧಿಗೂ ಒತ್ತು ನೀಡಲಾಗಿದೆ. ರೂ. 50 ಕೋಟಿ ವೆಚ್ಚದಲ್ಲಿ ಜೆಟಿಟಿಸಿ ಕಾಲೇಜು ಜೂನ್‌ನಿಂದ ಪ್ರಾರಂಭವಾಗಲಿದ್ದು, 6 ಎಕರೆ ಜಾಗದಲ್ಲಿ ರೂ.38 ಕೋಟಿ ವೆಚ್ಚದಲ್ಲಿ ಕಾರ್ಮಿಕರ ವಸತಿ ಶಾಲೆ ನಿರ್ಮಾಣವೂ ಶೀಘ್ರ ಆರಂಭವಾಗಲಿದೆ. ಅಲ್ಪಸಂಖ್ಯಾತರ ವಸತಿ ನಿಲಯ ಕಟ್ಟಡಕ್ಕೂ ಅನುದಾನ ಬಿಡುಗಡೆಯಾಗಿದ್ದು, ವಾರದೊಳಗೆ ಕಾಮಗಾರಿಗೆ ಚಾಲನೆ ನೀಡಲಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಐ.ಎಸ್. ಪಾಟೀಲ, ಸಂಗನಗೌಡ ಪಾಟೀಲ, ಬಸವರಾಜ ನವಲಗುಂದ, ಮುತ್ತಣ್ಣ ಸಂಗಳದ, ವಿ.ಬಿ. ಸೋಮನಕಟ್ಟಿಮಠ, ಇನಾಯತ್ ತರಪದಾರ, ಶಫೀಕ್ ಮೂಗನೂರ, ಪರಶುರಾಮ ಅಳಗವಾಡಿ, ಗುರುರಾಜ ಕುಲಕರ್ಣಿ, ಶಿವಣ್ಣ ನವಲಗುಂದ, ಯಲ್ಲಪ್ಪ ಕಿರೇಸೂರ, ಗದಿಗೆಪ್ಪ ಕಿರೇಸೂರ, ಮಲೀಕ್ ಯಲಿಗಾರ, ಅಸ್ಲಂ ಕೊಪ್ಪಳ, ಕಟ್ಟಿಮನಿ ಸೇರಿದಂತೆ ಹಲವರು ಹಾಗೂ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

**"ಒಳಚರಂಡಿ ಸಮಸ್ಯೆಗೆ : 1 ಕೋಟಿ ಕಾಮಗಾರಿ ಟೆಂಡರ್"**

ಪಟ್ಟಣದಲ್ಲಿ ಒಳಚರಂಡಿ ನೀರಿನ ಸಮಸ್ಯೆ ಪರಿಹರಿಸಲು 1 ಕೋಟಿ ವೆಚ್ಚದಲ್ಲಿ ಕಾಮಗಾರಿ ಟೆಂಡರ್ ಕರೆಯಲಾಗಿದೆ. ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ನಿರ್ಮಾಣಕ್ಕೆ ರೂ.40 ಲಕ್ಷ ಮೀಸಲಿರಿಸಲಾಗಿದೆ. ಪಟ್ಟಣದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕ ಸೇವೆ ಸಲ್ಲಿಸಲಾಗುತ್ತಿದೆ ಎಂದು ಶಾಸಕ ಜಿ.ಎಸ್. ಪಾಟೀಲ ತಿಳಿಸಿದ್ದಾರೆ.

# ನೆಮ್ಮದಿಯ ಜೀವನಕ್ಕೆ ಪುರಾಣ ಪ್ರವಚನ ಆಲಿಸುತ್ತಿರಬೇಕು: ಚನ್ನಬಸವ ಶ್ರೀಗಳು



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಆಧುನಿಕ ಜಗತ್ತಿಗೆ ಮರುಳಾಗಿ ಮಾನವ ದಿನವಿಡೀ ಒತ್ತಡದ ನಡುವೆ ಬದುಕುತ್ತಿದ್ದಾನೆ. ಒತ್ತಡಗಳಿಂದ ಹೊರ ಬಂದು ನೆಮ್ಮದಿಯಿಂದ ಜೀವನ ನಡೆಸಲು ಪುರಾಣ ಪ್ರವಚನವನ್ನು ಭಕ್ತಿ ಮತ್ತು ಶ್ರದ್ಧೆಯಿಂದ ಆಲಿಸುತ್ತಿರಬೇಕು ಎಂದು ನಿಡಗುಂದಿ ಕೊಪ್ಪದ ಅಭಿನವ ಚನ್ನಬಸವ ಸ್ವಾಮಿಗಳು ಹೇಳಿದರು.

ಸಮೀಪದ ನಿಡಗುಂದಿ ಕೊಪ್ಪದ ಧರ್ಮರ ಮಠದಲ್ಲಿ ಯುಗಾದಿ ಪಾಡ್ಯದಿಂದ ಬಸವ ಜಯಂತಿವರೆಗೆ ನಡೆಯುವ ಇಟಗಿ ಭೀಮಾಂಬಿಕೆ ದೇವಿ ಪುರಾಣ ಪ್ರಾರಂಭೋತ್ಸವದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಭೀಮಾಂಬಿಕೆ ದೇವಿ ಸರ್ವ ಜನಾಂಗದವರ ಬದುಕಿಗೆ ಬೆಳಕಾದವರು. ದೀಪ ತನ್ನ ಮೈ ಸುಟ್ಟುಕೊಂಡು ಪರರಿಗೆ ಬೆಳಕು ನೀಡುವಂತೆ ನಿಸ್ವಾರ್ಥ ಸೇವೆಗೈದು ಜನರ ಮನಸ್ಸಿನಲ್ಲಿ ಅಜರಾಮರವಾಗಿದ್ದಾರೆ. ಇಂತಹ ಶಿವಶರಣ–ಶರಣೆಯರ ಪುರಾಣ/ಪುಣ್ಯಕಥೆಗಳನ್ನು ಕೇಳುವುದರಿಂದ ಸಜ್ಜನರ ಸಹವಾಸದ ಮಹತ್ವ ತಿಳಿಯುತ್ತದೆ ಎಂದರು.

ಧರ್ಮರ ಮಠದ ವಂಶಸ್ಥ ನಾಗಲಿಂಗಪ್ಪಜ್ಜ ಧರ್ಮರ ಸಮ್ಮುಖದಲ್ಲಿ ಸೇವಾ ಸಮಿತಿಯ ಗುರು–ಹಿರಿಯರು ಉಪಸ್ಥಿತರಿದ್ದರು. ಶೇಖರಯ್ಯ ಹಿರೇಮಠ ಪುರಾಣ ಪ್ರವಚನ ನೀಡಿದರು.

# ಮೋದಿ ಗ್ಯಾರಂಟಿ ಮೇಲೆ 140 ಕೋಟಿ ಭಾರತೀಯರ ವಿಶ್ವಾಸ

■ ವಿಜಯಸಾಕ್ಷಿ ಸುದ್ದಿ, ಗದಗ



ಭಾರತದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಸುದೀರ್ಘ ಕಾಲ ಚುನಾಯಿತ ಸರ್ಕಾರದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿರುವ ಐತಿಹಾಸಿಕ ಮೈಲಿಗಲ್ಲು ಸಾಧಿಸಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಗದಗ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಭಿನಂದನೆ ಸಲ್ಲಿಸಿದೆ.

ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸಂತೋಷ ಅಕ್ಕಿ ಮಾತನಾಡಿ, ಮಾರ್ಚ್ 22, 2026ರ ವೇಳೆಗೆ ಪ್ರಧಾನಿ ಮೋದಿ ಅವರು ಒಟ್ಟು 8,931 ದಿನಗಳ ಆಡಳಿತ ಪೂರ್ಣಗೊಳಿಸಿದ್ದು, ಹಿಂದಿನ ಎಲ್ಲಾ ದಾಖಲೆಗಳನ್ನು ಮೀರಿಸಿದ್ದಾರೆ. ಗುಜರಾತ್ ಮುಖ್ಯಮಂತ್ರಿ (2001–2014) ಹಾಗೂ 2014ರಿಂದ ಸತತ ಮೂರು ಬಾರಿ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಿರುವುದು ಈ ಸಾಧನೆಯ ಹಿನ್ನೆಲೆಯಾಗಿದೆ ಎಂದರು.

ಈ ಸಾಧನೆ ಕೇವಲ ದಿನಗಳ ದಾಖಲೆ ಅಲ್ಲ, ದೇಶದ 140 ಕೋಟಿ ಜನರು 'ಮೋದಿ ಗ್ಯಾರಂಟಿ' ಮೇಲೆ ಇಟ್ಟಿರುವ ವಿಶ್ವಾಸದ ಪ್ರತೀಕವಾಗಿದೆ ಎಂದು ಅವರು ಹೇಳಿದರು. ಮೋದಿ ಅವರ ನಾಯಕತ್ವದಲ್ಲಿ ಭಾರತವು ಜಾಗತಿಕ ಮಟ್ಟದಲ್ಲಿ ಹೊಸ ಗುರುತನ್ನು ಪಡೆದಿದ್ದು, ಕಲಂ 370 ರದ್ದುಪಡಿಸುವುದು ಹಾಗೂ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆ ಸೇರಿದಂತೆ ಹಲವು ಐತಿಹಾಸಿಕ ನಿರ್ಧಾರಗಳು ದೇಶದ ದಿಕ್ಕು ಬದಲಿಸಿದ್ದವೆಂದು ಅಭಿಪ್ರಾಯಪಟ್ಟರು.

ಯುವಕರು ಮತ್ತು ಮಹಿಳೆಯರ ಸಬಲೀಕರಣಕ್ಕೆ ಕೇಂದ್ರ ಸರ್ಕಾರದ ಯೋಜನೆಗಳು ಮಹತ್ವದ ಪಾತ್ರ ವಹಿಸಿವೆ ಎಂದು ಸಂತೋಷ ಅಕ್ಕಿ ತಿಳಿಸಿದರು. ಡಿಜಿಟಲ್ ಇಂಡಿಯಾ ಮತ್ತು ಯುಪಿಐ ವ್ಯವಸ್ಥೆ, ವಂದೇ ಭಾರತ್ ರೈಲುಗಳ ವಿಸ್ತರಣೆ ಹಾಗೂ ನಾರಿ ಶಕ್ತಿ ವಂದನ ಅಧಿನಿಯಮದಂತಹ ಕ್ರಮಗಳು ಹೊಸ ಅವಕಾಶಗಳ ದಾರಿಯನ್ನು ತೆರೆಯಿವೆ ಎಂದರು.

ಭಾರತವು ವಿಶ್ವದ ಪ್ರಮುಖ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿರುವುದರ ಜೊತೆಗೆ ಜಿ20 ಅಧ್ಯಕ್ಷತೆಯ ಮೂಲಕ ಆಫ್ರಿಕನ್ ಯೂನಿಯನ್ ಅನ್ನು ಜಾಗತಿಕ ವೇದಿಕೆಗೆ ತರುವಲ್ಲಿ ಮೋದಿ ಅವರ ನಾಯಕತ್ವ ಮಹತ್ವದ್ದಾಗಿದೆ ಎಂದು ಅವರು ಹೇಳಿದರು.

ರಾಷ್ಟ್ರೀಯ ಭದ್ರತೆ ಕ್ಷೇತ್ರದಲ್ಲಿ ಬಾಲಾಕೋಟ್ ದಾಳಿ ಮತ್ತು ಸರ್ಜಿಕಲ್ ಸ್ಟ್ರೈಕ್‌ಗಳಂತಹ ನಿರ್ಣಾಯಕ ಕ್ರಮಗಳು ದೇಶದ ಭದ್ರತೆಯನ್ನು ಮತ್ತಷ್ಟು ಬಲಪಡಿಸಿವೆ ಎಂದರು.

ಇದೇ ವೇಳೆ, 2047ರೊಳಗೆ 'ವಿಕಸಿತ ಭಾರತ' ನಿರ್ಮಿಸುವ ಪ್ರಧಾನಮಂತ್ರಿಯವರ ಸಂಕಲ್ಪಕ್ಕೆ ಗದಗ ಜಿಲ್ಲೆಯ ಯುವಕರು ಸಂಪೂರ್ಣ ಬೆಂಬಲ ನೀಡಬೇಕು ಎಂದು ಕರೆ ನೀಡಿದರು. ಈ 8,931 ದಿನಗಳ ಸಾಧನೆ ಭಾರತವನ್ನು ಜಾಗತಿಕ ಮಹಾಶಕ್ತಿಯನ್ನಾಗಿ ರೂಪಿಸುವ ದೀರ್ಘ ಪ್ರಯಾಣದ ಆರಂಭ ಮಾತ್ರವಾಗಿದೆ ಎಂದು ಸಂತೋಷ ಅಕ್ಕಿ ಅಭಿಪ್ರಾಯಪಟ್ಟರು.

### ಕಸಾಪ ವತಿಯಿಂದ 'ಮಂಗೋಲಿಯಾ ಟು ಮಾಗಡಿ' ಪುಸ್ತಕ ಬಿಡುಗಡೆ

# ಪಕ್ಷಿಗಳು ಪರಿಸರ ಸಮತೋಲನದ ಆಧಾರ

■ ವಿಜಯಸಾಕ್ಷಿ ಸುದ್ದಿ, ಗದಗ

ಪಕ್ಷಿಗಳ ಜೀವನ ಕ್ರಮ ಮಾನವ ಸಮಾಜಕ್ಕೆ ಪ್ರೇರಣೆಯಾಗಿದ್ದು, ಪರಿಸರ ಸಮತೋಲನದಲ್ಲಿ ಅವುಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಪಕ್ಷಿಮಿತ್ರ ಪ್ರಕಾಶಗೌಡ ತಿಳಿಸಿದ್ದಾರೆ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಕೆ.ಎಸ್. ಕೊಡ್ಲಿವಾಡ ಅವರ 'ಮಂಗೋಲಿಯಾ ಟು ಮಾಗಡಿ' ವಲಸೆ ಪಕ್ಷಿಗಳ ಕುರಿತ ಪುಸ್ತಕದ ಕುರಿತು ಮಾತನಾಡಿದ ಅವರು, ಸಾವಿರಾರು ಕಿಲೋಮೀಟರ್ ದೂರ ವಲಸೆ ಬರುವ ಪಕ್ಷಿಗಳ ಸಾಮರ್ಥ್ಯ ಅದ್ಭುತವಾಗಿದೆ ಎಂದು ಹೇಳಿದರು. ಆಹಾರ, ನೀರು, ವಿಶ್ರಾಂತಿ ಇಲ್ಲದೇ ದೀರ್ಘ ಪ್ರಯಾಣ ಮಾಡುವ ಈ ಪಕ್ಷಿಗಳು ಪರಿಸರದ ಸಮತೋಲನ ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದರು.

ಪಕ್ಷಿಗಳು ಕೀಟಗಳ ಹಾವಳಿಯನ್ನು ನಿಯಂತ್ರಿಸುವುದರಿಂದ ಕೃಷಿಗೆ ಸಹಕಾರಿಯಾಗುತ್ತವೆ. ಜೊತೆಗೆ ಜೇನುನೊಣಗಳ ಪರಾಗಸ್ಪರ್ಶ ಕ್ರಿಯೆಯಿಂದ ಆಹಾರ ಉತ್ಪಾದನೆಗೆ ನೆರವಾಗುತ್ತದೆ. ಪಕ್ಷಿಗಳಿಂದ ಅರಣ್ಯ ವಿಕಾಸಕ್ಕೂ ಸಹಾಯವಾಗುತ್ತದೆ ಎಂಬುದನ್ನು ಅವರು ವಿವರಿಸಿದರು. ಮನುಷ್ಯನು ಶ್ರೇಷ್ಠತೆಯ ಮನೋಭಾವ ತೊರೆದು ಪರಿಸರದ ಭಾಗವಾಗಿ ಬದುಕಬೇಕು ಎಂದು ಅವರು ಸಲಹೆ ನೀಡಿದರು.



ಪುಸ್ತಕವನ್ನು ಬಿಡುಗಡೆಗೊಳಿಸಿದ ನಂದಿವೇರಿಮಠದ ಶಿವಕುಮಾರಸ್ವಾಮಿಗಳು, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ನಮ್ಮ ಬದುಕಿಗೆ ಅಗತ್ಯವಿರುವ ಮೂಲಭೂತ ಅಂಶಗಳೆಲ್ಲವೂ ಪರಿಸರದಿಂದಲೇ ದೊರೆಯುತ್ತವೆ ಎಂಬ ಅರಿವು ಬೆಳೆಸಿಕೊಳ್ಳಬೇಕು ಎಂದರು. 'ಮಂಗೋಲಿಯಾ ಟು ಮಾಗಡಿ' ಪುಸ್ತಕವು ವಿದ್ಯಾರ್ಥಿಗಳು ಹಾಗೂ ಪಕ್ಷಿಪ್ರಿಯರಿಗೆ ಉಪಯುಕ್ತ ಸಂಪನ್ಮೂಲವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್. ಬುರಡಿ ಮಾತನಾಡಿ, ಪರಿಸರ ಶಿಕ್ಷಣವನ್ನು ಪ್ರಾಯೋಗಿಕವಾಗಿ ಅಳವಡಿಸಿಕೊಳ್ಳುವ ಅಗತ್ಯವಿದೆ. ಜಿಲ್ಲೆಯ ಪ್ರವಾಸಿ ತಾಣಗಳ ಕುರಿತು ಜನಜಾಗೃತಿ ಮೂಡಿಸಬೇಕು ಎಂದು ಹೇಳಿದರು.

> "ವಲಸೆ ಪಕ್ಷಿಗಳ ಬಗ್ಗೆ ಅಧ್ಯಯನದ ಆಸಕ್ತಿಯಿಂದ ಈ ಕೃತಿಯನ್ನು ರಚಿಸಲಾಗಿದೆ. ಮಾಗಡಿ ಕೆರೆಯನ್ನು ಸ್ವಚ್ಛವಾಗಿಟ್ಟುಕೊಂಡು ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿದರೆ ಅದನ್ನು ಉತ್ತಮ ಪ್ರವಾಸಿ ತಾಣವನ್ನಾಗಿ ರೂಪಿಸಬಹುದು"
>
> **– ಕೆ.ಎಸ್. ಕೊಡ್ಲಿವಾಡ ಲೇಖಕ**

ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲೆಯಲ್ಲಿನ ಪ್ರವಾಸೋದ್ಯಮಕ್ಕೆ ಅಪಾರ ಅವಕಾಶಗಳಿದ್ದು, ಈ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿರುವುದು ಸಂತೋಷದ ಸಂಗತಿ ಎಂದರು.

ಬೇಸಿಗೆಯಲ್ಲಿ ಪ್ರಾಣಿ–ಪಕ್ಷಿಗಳ ರಕ್ಷಣೆಗೆ ಸಾರ್ವಜನಿಕರು ಮುಂದಾಗಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ವಿವಿಧ ಗಣ್ಯರು, ಸಾಹಿತ್ಯಾಸಕ್ತರು ಹಾಗೂ ಪಕ್ಷಿಪ್ರಿಯರು ಉಪಸ್ಥಿತರಿದ್ದರು. ನಿರೂಪಣೆಯನ್ನು ರಾಹುಲ್ ಗಿಡ್ನಂದಿ ನಿರ್ವಹಿಸಿದರು. ಡಿ.ಎಸ್. ಬಾಪುರಿ ಸ್ವಾಗತಿಸಿ, ಅಶೋಕ ಹಾದಿ ವಂದಿಸಿದರು.

## 'ಚಿನ್ಮಯ ಕಲಾಶ್ರೀ' ಪ್ರಶಸ್ತಿಗೆ ಭಾಜನರಾದ ಬಸವರಾಜ ಅಡವಳ್ಳಿ

■ವಿಜಯಸಾಕ್ಷಿ ಸುದ್ದಿ, ಗದಗ



ಜಿಲ್ಲೆಯ ಸಾಂಸ್ಕೃತಿಕ ವಲಯದಲ್ಲಿ ರಂಗಭೂಮಿಯನ್ನು ಕೇಂದ್ರವಾಗಿಸಿಕೊಂಡು ವೈಶಿಷ್ಟ್ಯಪೂರ್ಣ ಕಾರ್ಯಕ್ರಮಗಳ ಮೂಲಕ ಸೇವೆ ಸಲ್ಲಿಸುತ್ತಿರುವ ಚಿನ್ಮಯ ಸಾಂಸ್ಕೃತಿಕ ಅಕಾಡೆಮಿಯು ಕಳೆದ ಹತ್ತು ವರ್ಷಗಳಿಂದ ವಿಶ್ವ ರಂಗಭೂಮಿ ದಿನಾಚರಣೆಯನ್ನು ಆಚರಿಸುತ್ತ ಬಂದಿದೆ. ರಂಗಭೂಮಿ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ಹಿರಿಯ ಕಲಾವಿದರಿಗೆ 'ಚಿನ್ಮಯ ಕಲಾಶ್ರೀ' ಪ್ರಶಸ್ತಿ ಪ್ರದಾನ ಮಾಡುವ ಮೂಲಕ ಕಲೆ ಮತ್ತು ಕಲಾವಿದರನ್ನು ಉತ್ತೇಜಿಸುವ ಕಾರ್ಯವನ್ನು ನಿರಂತರವಾಗಿ ಮುಂದುವರಿಸಿದೆ.

ಪ್ರಸಕ್ತ 2026ರ ಹನ್ನೊಂದನೇ ವರ್ಷದ ರಂಗಭೂಮಿ ದಿನಾಚರಣೆಯ ಅಂಗವಾಗಿ, ಈ ಸಾಲಿನ 'ಚಿನ್ಮಯ ಕಲಾಶ್ರೀ' ಪ್ರಶಸ್ತಿಗೆ ಹಿರಿಯ ರಂಗಕಲಾವಿದರಾದ ಬಸವರಾಜ ಶಿ. ಅಡವಳ್ಳಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಅಕಾಡೆಮಿಯ ಪ್ರಕಟಣೆ ತಿಳಿಸಿದೆ. ರಂಗಭೂಮಿ ಕ್ಷೇತ್ರದಲ್ಲಿ ಸಂಗೀತ ನಿರ್ದೇಶಕರಾಗಿ ಸೇವೆ ಸಲ್ಲಿಸುವುದರೊಂದಿಗೆ ನಟ ಹಾಗೂ ನಿರ್ದೇಶಕರಾಗಿ ಕೂಡ ಬಸವರಾಜ ಅಡವಳ್ಳಿ ಅವರು ಗಮನಾರ್ಹ ಕೊಡುಗೆ ನೀಡಿದ್ದಾರೆ. ಪ್ರಶಸ್ತಿಗೆ ಆಯ್ಕೆಯಾದ ಅವರನ್ನು ಚಿನ್ಮಯ ಸಾಂಸ್ಕೃತಿಕ ಅಕಾಡೆಮಿಯ ಅಧ್ಯಕ್ಷ ಮೌನೇಶ ಸಿ. ಬಡಿಗೇರ (ನರೇಗಲ್ಲ), ಆರ್‌ಎನ್‌ಕೆ ಮಿತ್ರ ಮಂಡಳಿಯ ಉಪಾಧ್ಯಕ್ಷ ಎಸ್. ಬಿ. ಕುಲಕರ್ಣಿ, ಹಿರಿಯ ಸಾಹಿತಿಗಳಾದ ಅಂದಾನೆಪ್ಪ ವಿಭೂತಿ, ಐ. ಕೆ. ಕಮ್ಮಾರ, ರಂಗ ನಿರ್ದೇಶಕರಾದ ಫಣೀಂದ್ರಚಾರ್ಯ ದ್ಯಮೇನಹಳ್ಳಿ, ನಿವೃತ್ತ ಪ್ರಾಂಶುಪಾಲ ಆರ್. ಡಿ. ಕಡ್ಲಿಕೊಪ್ಪ, ರಂಗಕಲಾವಿದರಾದ ಮುರಲೀಧರ ಸಂಕನೂರ, ಡಾ. ದತ್ತಪ್ರಸನ್ನ ಪಾಟೀಲ, ಡಾ. ಗಿರೀಶ ಬಡಿಗೇರ, ಜಾನಪದ ಕಲಾವಿದರಾದ ಶಿವಪ್ಪ ಭಜಂತ್ರಿ, ಶ್ರೀಧರ ಕೊಣ್ಣೂರ, ವಿಶ್ವನಾಥ ಕಮ್ಮಾರ, ಮಹೇಶ ಕಮ್ಮಾರ, ರಾಚಯ್ಯ ಹೊಸಮಠ, ವಿಶ್ವನಾಥ ಬೇಂದ್ರೆ, ವೀರಯ್ಯ ಹೊಸಮಠ, ಸುಭಾಸ ಮಳಗಿ, ಸೂರಜ್ ಮಯೇಕರ ಸೇರಿದಂತೆ ಅನೇಕ ಪದಾಧಿಕಾರಿಗಳು ಮತ್ತು ಸದಸ್ಯರು ಅಭಿನಂದಿಸಿದ್ದಾರೆ.

ಪಂಚಾಚಾರ್ಯ ಯುಗಮಾನೋತ್ಸವ ಭವ್ಯ ಸಮಾರಂಭ: ಪ್ರವಚನ ಗ್ರಂಥ ಬಿಡುಗಡೆ

# ಸತ್ಯದ ಮಾರ್ಗವೇ ಶಾಶ್ವತ ದಾರಿ!

■ವಿಜಯಸಾಕ್ಷಿ ಸುದ್ದಿ, ಹಾವೇರಿ

ಆಧುನಿಕ ಯುಗದಲ್ಲಿ ಮಾನವ ಜೀವನದಲ್ಲಿ ಶಾಂತಿ, ತೃಪ್ತಿ ಕಡಿಮೆಯಾಗುತ್ತಿದ್ದು, ಹೋರಾಟ ಮತ್ತು ಸಂಘರ್ಷಗಳು ಹೆಚ್ಚುತ್ತಿರುವ ಹಿನ್ನೆಲೆ, ಮನುಷ್ಯನ ನಡೆ-ನುಡಿಗಳು ಸದಾ ಸತ್ಯದ ಪರವಾಗಿರಬೇಕು ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ಡಾ. ವೀರಸೋಮೇಶ್ವರ ಜಗದ್ಗುರುಗಳು ಹೇಳಿದರು.

ತಾಲೂಕಿನ ನೆಗಳೂರು ಸಂಸ್ಥಾನ ಹಿರೇಮಠದ ಆವರಣದಲ್ಲಿ ನಡೆದ ಪಂಚಾಚಾರ್ಯ ಯುಗಮಾನೋತ್ಸವ ಹಾಗೂ ವೀರಶೈವ ಪಂಚಸೂತ್ರಗಳ ಪ್ರವಚನ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು,

"ಸುಳ್ಳಿನೊಂದಿಗೆ ದುಷ್ಟಶಕ್ತಿ ಇದ್ದರೂ, ಸತ್ಯದೊಂದಿಗೆ ದೈವಶಕ್ತಿ ಸದಾ ಇರುತ್ತದೆ" ಎಂದು ಹೇಳಿದರು.

ಶ್ರೀ ಉಜ್ಜಯಿನಿ ಸಿದ್ಧಲಿಂಗ ಜಗದ್ಗುರುಗಳು ಮಾತನಾಡಿ, ಸತ್ಯ ಮನುಷ್ಯನನ್ನು ಬದಲಾಯಿಸುವ ಶಕ್ತಿ ಹೊಂದಿದ್ದು, ಜೀವನದ ಉನ್ನತಿ-ಅವನತಿಗಳಿಗೆ ಮನಸ್ಸೇ ಮೂಲ ಕಾರಣ ಎಂದು ಹೇಳಿದರು. ಧಾರ್ಮಿಕ ಮೌಲ್ಯಗಳನ್ನು ಅಳವಡಿಸಿಕೊಂಡರೆ ಬದುಕು ಸುಧಾರಿಸುತ್ತದೆ ಎಂದರು.

ಶ್ರೀಶೈಲದ ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ



ಜಗದ್ಗುರುಗಳು, ಸುಖದ ಹುಡುಕಾಟ ಸಹಜವಾದರೂ ದುರ್ನಡತೆ ಜೀವನವನ್ನು ಹಾಳು ಮಾಡುತ್ತದೆ. ಧರ್ಮದ ಮಾರ್ಗವೇ ಶಾಶ್ವತ ದಾರಿ ಎಂದು ತಿಳಿಸಿದರು.

ಕಾಶಿ ಪೀಠದ ಡಾ. ಚಂದ್ರಶೇಖರ ಜಗದ್ಗುರುಗಳು ವೀರಶೈವ ಪಂಚಸೂತ್ರಗಳ ಮಹತ್ವವನ್ನು ವಿವರಿಸಿ, ಆತ್ಮಾನುಸಂಧಾನದಿಂದ ಸತ್ಯದ ಅರಿವು ಸಾಧ್ಯವೆಂದರು.

"ವೀರಶೈವ ಪಂಚ ಸೂತ್ರೀಯ ಪ್ರವಚನ" ಗ್ರಂಥವನ್ನು ನವ್ಯ ಸಾಹಿತ್ಯ ಸಂಶೋಧಕ ರವಿ ಹಂಜ್ ಬಿಡುಗಡೆ ಮಾಡಿ, ಶಿವಶಕ್ತಿ ತತ್ವ ಮತ್ತು ಆಧ್ಯಾತ್ಮಿಕ ಚಿಂತನೆಗಳ ಮಹತ್ವವನ್ನು ವಿವರಿಸಿದರು.

### ಪಂಚಾಚಾರ್ಯರ ಸಂದೇಶ

ಜೀವಾತ್ಮ - ಪರಮಾತ್ಮ ಅನುಸಂಧಾನವೇ ಜೀವನದ ಗುರಿ ಸತ್ಯದ ಮಾರ್ಗವೇ ಶಾಶ್ವತ ಮಾರ್ಗ ಧರ್ಮದ ಮೌಲ್ಯಗಳು ಜೀವನವನ್ನು ರೂಪಿಸುತ್ತವೆ ಆತ್ಮಾನುಸಂಧಾನದಿಂದ ಸತ್ಯದ ಅರಿವು ಸಾಧ್ಯ

ಬೆಂಗಳೂರಿನ ಡಾ. ಸಿ. ಶಿವಕುಮಾರಸ್ವಾಮಿ ಪಂಚಸೂತ್ರಗಳ ಕುರಿತು ಪರಿಚಯ ನೀಡಿದರು.

"ಸುಳ್ಳಿನೊಂದಿಗೆ ದುಷ್ಟಶಕ್ತಿ ಇದ್ದರೂ, ಸತ್ಯದೊಂದಿಗೆ ದೈವಶಕ್ತಿ ಸದಾ ಇರುತ್ತದೆ."
– ರಂಭಾಪುರಿ ಜಗದ್ಗುರು ಡಾ. ವೀರಸೋಮೇಶ್ವರ ಶ್ರೀ

ವಿಧಾನಸಭಾ ಉಪಸಭಾಪತಿ ರುದ್ರಪ್ಪ ಲಮಾಣಿ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ, ಧರ್ಮವು ಸಮಾಜವನ್ನು ಕಟ್ಟುವ ಶಕ್ತಿ ಹೊಂದಿದ್ದು, ಕೆಡುವುದಕ್ಕಿಂತ ಕಟ್ಟುವ ಕಾರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಅಭಿಪ್ರಾಯಪಟ್ಟರು.

ನೆಗಳೂರು ಹಿರೇಮಠದ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಕಾರ್ಯಕ್ರಮದ ನೇತೃತ್ವ ವಹಿಸಿ, ಈ ಯುಗಮಾನೋತ್ಸವ ನೆಗಳೂರಿನಲ್ಲಿ ನಡೆಯುತ್ತಿರುವುದು ಅಪೂರ್ವ ಸೌಭಾಗ್ಯ ಎಂದು ಹೇಳಿದರು.

ವಿವಿಧ ಮಠಾಧೀಶರು, ಗಣ್ಯರು ಹಾಗೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮದ ಅಂಗವಾಗಿ ಭಕ್ತರಿಗೆ ನಿರಂತರ ಅನ್ನದಾಸೋಹ ವ್ಯವಸ್ಥೆ ಮಾಡಲಾಗಿತ್ತು.

ಅಂಜುಮನ್ ಪ್ರೌಢ ಶಾಲಾ ಆವರಣದಲ್ಲಿ ರಂಜಾನ್ ಹಬ್ಬದ ಸಾಮೂಹಿಕ ಪ್ರಾರ್ಥನೆಯಲ್ಲಿ ಸಾವಿರಾರು ಮುಸ್ಲಿಂ ಬಾಂಧವರು ಭಾಗಿ

# ಏಕತೆ, ಸಹೋದರತೆ ಇಸ್ಲಾಂ ಧರ್ಮದ ಮೂಲ ತತ್ವ

■ವಿಜಯಸಾಕ್ಷಿ ಸುದ್ದಿ, ರೋಣ



ಏಕತೆ ಮತ್ತು ಸಹೋದರತೆ ಇಸ್ಲಾಂ ಧರ್ಮದ ಮೂಲ ತತ್ವವಾಗಿದ್ದು, ಈ ಹಿನ್ನಲೆಯಲ್ಲಿ ಮುಸ್ಲಿಂ ಬಾಂಧವರು ಸರ್ವ ಸಮಾಜದೊಂದಿಗೆ ಸೌಹಾರ್ದತೆಯಿಂದ ಬಾಳಬೇಕು ಎಂದು ಅಂಜುಮನ್ ಸಂಸ್ಥೆ ಅಧ್ಯಕ್ಷ ಬಾವಾಸಾಬ ಬೆಟಗೇರಿ ಹೇಳಿದರು.

ಶನಿವಾರ ಪಟ್ಟಣದ ಅಂಜುಮನ್ ಪ್ರೌಢ ಶಾಲಾ ಆವರಣದಲ್ಲಿ ಜರುಗಿದ ರಂಜಾನ್ ಹಬ್ಬದ ಸಾಮೂಹಿಕ ಪ್ರಾರ್ಥನೆಯಲ್ಲಿ ಸಮಾಜವನ್ನು ಉದ್ದೇಶಿಸಿ ಮಾತನಾಡಿದ ಅವರು, ಮುಸ್ಲಿಂರಿಗೆ ರಂಜಾನ್ ಹಬ್ಬವು ಅತ್ಯಂತ ಪವಿತ್ರ ಹಬ್ಬವಾಗಿದೆ. ತಿಂಗಳಕಾಲದ ಉಪವಾಸವನ್ನು ಆಚರಿಸಿ, ಪ್ರತಿನಿತ್ಯ ವಿಶೇಷ ಪ್ರಾರ್ಥನೆ ನೆರವೇರಿಸಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ಮುಖ್ಯವಾಗಿ ಈ ಹಬ್ಬದಲ್ಲಿ ದಾನಕ್ಕೆ ಅತ್ಯಂತ ಮಹತ್ವ ನೀಡಲಾಗಿದ್ದು, ಮುಸ್ಲಿಂ ಬಾಂಧವರು ಬಡವರಿಗೆ ತಮ್ಮಿಂದಾದ ಸಹಾಯವನ್ನು ತಪ್ಪದೆ ಮಾಡಬೇಕು ಎಂದು ಅವರು ಹೇಳಿದರು. "ಅದರ ಮೂಲಕ ಮಾತ್ರ ನಮ್ಮ ಉಪವಾಸ ಮತ್ತು ವ್ರತಗಳಿಗೆ ಪುಣ್ಯದ ಫಲ ದೊರಕಲಿದೆ ಎಂದರು.

ಜಿಲ್ಲಾ ವಕ್ಫ್ ಬೋರ್ಡ್ ಜಿಲ್ಲಾದ್ಯಕ್ಷ ಯೂಸುಪ್ ಇಟಗಿ ಮಾತನಾಡಿ, ಸಮಾಜದ ಬಾಂಧವರು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಬೇಕು. ಮಕ್ಕಳಲ್ಲಿ ಅಕ್ಷರ ಜ್ಞಾನವು ಸಮಾಜದ ಅಭಿವೃದ್ಧಿಗೆ ಮಾರ್ಗದರ್ಶನ ನೀಡುವಂತೆ, ಇಂದಿನ ಮಕ್ಕಳು ಧರ್ಮದ ಪದ್ದತಿಯ ಜೊತೆಗೆ ಶಿಕ್ಷಣವನ್ನು ಪಡೆಯಬೇಕು. ಮುಸ್ಲಿಂ ಬಾಂಧವರು ಐದು ತತ್ವಗಳೊಂದಿಗೆ ತಮ್ಮ ಜೀವನವನ್ನು ನಿರ್ವಹಿಸಿದಾಗ ಮಾತ್ರ ನೆಮ್ಮದಿ ಜೀವನ ಸಾಧ್ಯ ಎಂದರು.

ರಾಜ್ಯ ಯುವ ಕಾಂಗ್ರೆಸ್ ಪ್ರಧಾನಕಾರ್ಯದರ್ಶಿ ಅಕ್ಷಯ ಪಾಟೀಲ ಮಾತನಾಡಿ, ನಮ್ಮ ದೇಶದಲ್ಲಿ ಹಲವು ಧರ್ಮಗಳು ಹಾಗೂ ಭಾಷೆಗಳಿವೆ. ಎಲ್ಲ ಧರ್ಮಗಳ ಹಬ್ಬಗಳನ್ನು ಸಹಜವಾಗಿ ಆಚರಿಸಿದಾಗ ಮಾತ್ರ ಪ್ರತಿಯೊಂದು ಹಬ್ಬಕ್ಕೂ ವಿಶೇಷ ಮೆರಗು ಸಿಗುತ್ತದೆ. ಮುಸ್ಲಿಂರ ಪವಿತ್ರ ರಂಜಾನ್ ಹಬ್ಬವು ದೇಶದ ನಾಗರಿಕರಿಗೂ ಒಳಿತಾಗಲಿ ಎಂದು ಆಶಿಸಿದರು.

ಖಾಲೀದ ರಾಮದುರ್ಗ, ಮಲಿಕ ಯಲಿಗಾರ, ಇನಾಯತ್ ತರಪದಾರ, ಎ.ಐ. ಶೇಖ್, ಶಫೀಕ್ ಮೂಗನೂರ, ಸಾಕೀಂ ಹೊಸೂರ, ದಾವಲಸಾಬ ಬಾಡಿನ, ಅಸ್ಲಂ ಕೊಪ್ಪಳ, ರಿಯಾಜ್ ಮುಲ್ಲಾ, ಕೆ.ಕೆ. ಮುಲ್ಲಾ, ಬಾಷಾಸಾಬ ಚಿನ್ನೂರ ಸೇರಿದಂತೆ ಸಾವಿರಾರು ಮುಸ್ಲಿಂ ಭಾಂದವರು ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು.

# ಮಾರುತೇಶ್ವರ ಬಣ್ಣದ ಹೊಂಡ ತುಳುಕಿಸಿ ಸಂಭ್ರಮಿಸಿದ ಭಕ್ತರು

■ವಿಜಯಸಾಕ್ಷಿ ಸುದ್ದಿ, ಗದಗ



ತಾಲೂಕಿನ ತಿಮ್ಮಾಪೂರ ಗ್ರಾಮದ ಶ್ರೀ ಮಾರುತೇಶ್ವರ ಜಾತ್ರೆಯ ಹಿನ್ನೆಲೆಯಲ್ಲಿ ಮಾರುತಿ ದೇವರ ಬಣ್ಣದ ಹೊಂಡವನ್ನು ಶನಿವಾರ ರಾತ್ರಿ ನೂರಾರು ಭಕ್ತರು ತುಳುಕಿಸಿ ಸಂಭ್ರಮಿಸಿದರು.

ರಾತ್ರಿ ಆರಂಭವಾದ ಹೊಂಡ ತುಳುಕಿಸುವ ಕಾರ್ಯಕ್ರಮದಲ್ಲಿ ಒಂದು ಗಂಟೆಗಳ ಕಾಲ ಪೂಜಾರಿಗಳು ಕಾಯಿ ಹರಿಯುವ ಮೂಲಕ ಹೊಂಡ ತುಳುಕಿಸಿದರು.

ನಂತರ ಯುವಕರು ಪರಸ್ಪರ ಹೊಂಡದಲ್ಲಿ ಹಾರಿ ಬಣ್ಣದ ನೀರನ್ನು ಎರೆದು ಸಂಭ್ರಮಿಸಿದರು. ಇದಕ್ಕೂ ಪೂರ್ವದಲ್ಲಿ ತಿರುಕಪ್ಪ ಕುಂಬಾರ ಅವರ ಮನೆಗೆ ತೆರಳಿ ಕುಂಭ ತಂದು ಗಂಗಾ ಪೂಜೆ ನೆರವೇರಿಸಲಾಯಿತು.

ಹೊಂಡದ ಸುತ್ತ ಸುರಗಿ ಸುತ್ತಿದ ನಂತರ ಧಾರ್ಮಿಕ ವಿಧಾನಗಳೊಂದಿಗೆ ಪೂಜೆ ಸಲ್ಲಿಸಿದರು. ಈ ವರ್ಷ ಗೋವಿಂದ ಪೂಜಾರ ಹೊಂಡದ ಕಾಯಿಯನ್ನು ಹರಿದರು.

ಹೊಂಡ ತುಳುಕಿಸಿದ ನಂತರ ಐದು ಹೆಜ್ಜೆ ರಥವನ್ನು ಎಳೆಯುವ ಮೂಲಕ ಜಾತ್ರೆಗೆ ವಿದ್ಯುಕ್ತವಾಗಿ ಚಾಲನೆ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಅರ್ಚಕರಾದ ವೆಂಕಟೇಶ ಪೂಜಾರ, ಸುರೇಶ ಪೂಜಾರ, ಹರೀಶ ಪೂಜಾರ, ಶ್ರೀಕಾಂತ ಪೂಜಾರ, ಶಂಕ್ರಪ್ಪ ಪೂಜಾರ, ಹನುಮಪ್ಪ ಪೂಜಾರ ಹಾಗೂ ನೂರಾರು ಭಕ್ತರು ಪಾಲ್ಗೊಂಡಿದ್ದರು.

# ಮನಸ್ಸು ಯಾವಾಗಲೂ ಪ್ರಫುಲ್ಲವಾಗಿರಲಿ



■ವಿಜಯಸಾಕ್ಷಿ ಸುದ್ದಿ, ನರೇಗಲ್

ಮನುಷ್ಯನ ಮನಸ್ಸು ಪ್ರಫುಲ್ಲತೆಯಿಂದ ಇದ್ದರೆ ಧಾರ್ಮಿಕ, ಸಾಮಾಜಿಕ ಕಾರ್ಯಗಳಲ್ಲಿ ಎಂತಹ ಸಮಸ್ಯೆಗಳು ಎದುರಾದರೂ ಸಹ ಅವುಗಳನ್ನು ಧೈರ್ಯದಿಂದ ಎದುರಿಸಲು ಸಾಧ್ಯವಾಗುತ್ತದೆ ಎಂದು ತಾವರಗೇರಿ ಸರಕಾರಿ ಪದವಿ ಮಹಾವಿದ್ಯಾಲಯದ ಉಪನ್ಯಾಸಕ ವಾಯ್. ವಾಯ್. ತಳವಾರ ಹೇಳಿದರು.

ನರೇಗಲ್ಲ ಭಾಗ್ಯನಗರದ ಮಾರುತಿ ದೇವರ ಮೂರ್ತಿ ಮರುಪ್ರಾಣ ಪ್ರತಿಷ್ಠಾಪನಾ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು, ಸಕಲ ಜನಾಂಗದ ಆರಾಧ್ಯ ದೈವ ಶ್ರೀ ಮಾರುತಿ ದೇವರಾಗಿದ್ದಾನೆ. ಈ ನಾಡಿನ ಪುಣ್ಯ ಭೂಮಿಯಲ್ಲಿ ಆಂಜನಾದ್ರಿ ಮಾರುತಿ ದೇವರು ನೆಲೆಸಿದ್ದು ನಮ್ಮೆಲ್ಲರ ಪುಣ್ಯ. ಎಲ್ಲರೂ ಆಂಜನಾದ್ರಿ ಮಾರುತಿ ದೇವರ ದರ್ಶನ ಪಡೆಯಲು ಸಾಧ್ಯವಾಗದ ಕಾರಣ ತಾವುಗಳು ನೆಲೆಸಿದ ಸ್ಥಳದಲ್ಲಿ ಮಾರುತಿ ದೇವರನ್ನು ಪ್ರತಿಷ್ಠಾಪಿಸಿ ಪೂಜಿಸುತ್ತೇವೆ ಎಂದರು.

ಇಂದಿನ ತಂತ್ರಜ್ಞಾನ ಯುಗದಲ್ಲಿಯೂ ಇಷ್ಟೊಂದು ಅಚ್ಚುಕಟ್ಟಾಗಿ ಆಚರಣೆಗಳನ್ನು ನಡೆಸಿಕೊಂಡು ಬಂದಿರುವುದು ಈ ಓಣಿಯ ಸಂಸ್ಕಾರ ಸಹಬಾಳ್ವೆಯನ್ನು ತೋರಿಸುತ್ತದೆ. ಪ್ರತಿನಿತ್ಯ ಮಾರುತಿ ದೇವರ ಆರಾಧನೆ ಮಾಡಿಕೊಂಡು ದೇವರ ಅನುಗ್ರಹ ಪಡೆಯಿರಿ ಎಂದು ಹೇಳಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ನರೇಗಲ್ಲ ಹಿರೇಮಠದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿ ಮಠ, ಮಂದಿರ, ದೇವಾಲಯಗಳ ಸಂಸ್ಕೃತಿಯ ಮೂಲಕ ನಮ್ಮ ರಾಷ್ಟ್ರವು ಸುಸಂಸ್ಕೃತ ಸಮಾಜವಾಗಿ ಹೊರಹೊಮ್ಮಿದೆ. ಕಲಿಯುಗದಲ್ಲಿ ಇಂತಹ ಧಾರ್ಮಿಕ ಕಾರ್ಯಗಳ ಆಚರಣೆಯಿಂದ ಭಗವಂತನ ಒಲುಮೆ ಸಾಧ್ಯವಿದೆ. ಸರಕಾರದಿಂದ ಆಗಬೇಕಾದ ಕಾರ್ಯವನ್ನು ಸಮುದಾಯದವರು ಮಾಡಿದ್ದು ಶ್ಲಾಘನೀಯ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ನರೇಗಲ್ಲ ದರಗಾದ ಹಜರತ್ ಮಂಜೂರ ಹುಸೇನ ಶ್ಯಾವಲಿ, ಶರಣಪ್ಪ ಬೆಟಗೇರಿ, ಶಿಕ್ಷಕ ಎ. ಟಿ. ಮಳ್ಳಳ್ಳಿ, ಬಿ. ಡಿ. ಯರಗೊಪ್ಪ, ರುದ್ರಮುನಿಸ್ವಾಮಿ ಹಿರೇಮಠ, ಮಂಜುನಾಥ ಜೋಳದ ಪಾಲ್ಗೊಂಡಿದ್ದರು. ಹನಮಂತಪ್ಪ ಬಾಗಲಿ, ರಾಮಣ್ಣ ಜೋಡಗಂಬಳಿ, ಬಸನಗೌಡ ಧರ್ಣೆಪ್ಪಗೌಡ್ರ, ಸತೀಶ ಬಾಗಲಿ, ರಮೇಶ ಈಟಿ, ಸಂಗಪ್ಪ ಹೂಗಾರ, ಬಸಪ್ಪ ಗಡ್ಡದ, ಶಿದ್ದಪ್ಪ ಕಂಬಳಿ, ಯಲಪ್ಪ ಗೊರ್ಲಿ ಉಪಸ್ಥಿತರಿದ್ದರು.

ಎಪ್ರಿಲ್ 4ರವರೆಗೆ ಸದಸ್ಯತ್ವ, ಮೇ 24ರಂದು ಮತದಾನ-ಎಣಿಕೆ ಒಂದೇ ದಿನ

# ನಾಲ್ಕು ತಾಲೂಕುಗಳಲ್ಲಿ ಮಹಾಸಭಾ ಚುನಾವಣೆ ವೇಳಾಪಟ್ಟಿ ಪ್ರಕಟ!

■ವಿಜಯಸಾಕ್ಷಿ ಸುದ್ದಿ, ಗದಗ

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ (ರಿ) ರಾಜ್ಯದ ವಿವಿಧ ಜಿಲ್ಲೆ ಹಾಗೂ ತಾಲೂಕು ಘಟಕಗಳ ಚುನಾವಣೆ ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿದ್ದ ಹಿನ್ನೆಲೆಯಲ್ಲಿ ಇದೀಗ ಏಕಕಾಲದಲ್ಲಿ ಚುನಾವಣೆಯನ್ನು ನಡೆಸಲು ತೀರ್ಮಾನಿಸಲಾಗಿದೆ. ಮಹಾಸಭಾದ ರಾಜ್ಯಾಧ್ಯಕ್ಷ ಹಾಗೂ ಸಚಿವ ಈಶ್ವರ ಖಂಡ್ರೆ ಅವರ ನಿರ್ದೇಶನದಂತೆ ಗದಗ ಜಿಲ್ಲೆಯ ನರಗುಂದ, ಗಜೇಂದ್ರಗಡ, ಲಕ್ಷ್ಮೇಶ್ವರ ಮತ್ತು ಶಿರಹಟ್ಟಿ ತಾಲೂಕು ಘಟಕಗಳಲ್ಲಿ ಚುನಾವಣೆ ನಡೆಯಲಿದೆ.

ಮಹಾಸಭೆಯ ಆಜೀವ ಸದಸ್ಯತ್ವ ಪಡೆಯಲು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಎಪ್ರಿಲ್ 4 ನಿಗದಿಪಡಿಸಲಾಗಿದೆ. ತಾತ್ಕಾಲಿಕ ಮತದಾರರ ಪಟ್ಟಿಯನ್ನು ಎಪ್ರಿಲ್ 15ರಂದು ಪ್ರಕಟಿಸಲಾಗುತ್ತಿದ್ದು, ಆ ದಿನದಿಂದಲೇ ಮತದಾರರು ತಮ್ಮ ವಿವರಗಳನ್ನು ಪರಿಶೀಲಿಸಬಹುದು. ಅಂತಿಮ ಮತದಾರರ ಪಟ್ಟಿಯನ್ನು ಎಪ್ರಿಲ್ 23ರಂದು ಪ್ರಕಟಿಸಲಾಗುವುದು. ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಎಪ್ರಿಲ್ 29ರಂದು ಬೆಳಿಗ್ಗೆ 10:30ಕ್ಕೆ ಆರಂಭವಾಗಿ, ಮೇ 6 ಮಧ್ಯಾಹ್ನ 3 ಗಂಟೆಯವರೆಗೆ ನಡೆಯಲಿದೆ. ಮೇ 7ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಮೇ 10 ಭಾನುವಾರ ಮಧ್ಯಾಹ್ನ 3 ಗಂಟೆಯವರೆಗೆ ನಾಮಪತ್ರ ಹಿಂಪಡೆಯಲು ಅವಕಾಶ ನೀಡಲಾಗಿದೆ. ಮೇ 24ರಂದು ಭಾನುವಾರ ಬೆಳಿಗ್ಗೆ 8ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದ್ದು, ಮತದಾನ ಮುಗಿದ ಕೂಡಲೇ ಮತ ಎಣಿಕೆ ನಡೆಯಲಿದೆ ಎಂದು ಮಹಾಸಭಾದ ಗದಗ ಜಿಲ್ಲಾ ಅಧ್ಯಕ್ಷ ಶರಣಬಸಪ್ಪ ಗುಡಿಮನಿ ತಿಳಿಸಿದ್ದಾರೆ.

# ಶರಣರ ವಚನಗಳು ಕನ್ನಡ ಸಾಹಿತ್ಯದ ಅಮೂಲ್ಯ ಆಸ್ತಿಗಳು

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ




12ನೇ ಶತಮಾನದ ಶರಣರು ಕನ್ನಡ ನಾಡಿನ ವಚನ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನೀಡಿದ್ದು, ಸಮಾಜದ ಅಂಧಶ್ರದ್ಧೆ ಮತ್ತು ಮೂಢನಂಬಿಕೆಗಳನ್ನು ನಿವಾರಣೆ ಮಾಡುವ ಮೂಲಕ ಸಾಮಾಜಿಕ ಕ್ರಾಂತಿಯನ್ನು ಮೂಡಿಸಿದ್ದಾರೆ ಎಂದು ತಾಲೂಕು ಗ್ರಾಮೀಣ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಸ್.ಎಂ. ಮರಿಗೌಡರು ಹೇಳಿದರು.

ಲಕ್ಷ್ಮೇಶ್ವರ ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆಯ ಸಂಯುಕ್ತ ಆಶ್ರಯದಲ್ಲಿ, ಈಶ್ವರ ನಗರದ ಈಶ್ವರ ದೇವಸ್ಥಾನದಲ್ಲಿ ನಡೆದ ದತ್ತಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು, ಶರಣರು ತಮ್ಮ ವಚನಗಳ ಮೂಲಕ ಆಧ್ಯಾತ್ಮಿಕ ಲೋಕಕ್ಕೆ ದಾರಿಯನ್ನೆ ತೆ-ೋರಿಸಿ, ಸಣ್ಣ ನುಡಿಗಳಲ್ಲಿ ಮಹತ್ತರ ಅರ್ಥಗಳನ್ನು ಹಂಚಿದ್ದಾರೆ. ಚನ್ನಬಸವ ಶರಣರು ನೂರಾರು ವಚನಗಳ ಮೂಲಕ ಹಿರಿಯ ಶರಣರ ಚಿಂತನೆಗಳನ್ನು ಮುಂದಿನ ಪೀಳಿಗೆಗೆ ಬೋಧಿಸಿದ್ದಾರೆ. ಇಂತಹ ಕಾರ್ಯವನ್ನು ಇಂದಿನ ಶರಣ ಸಾಹಿತ್ಯ ಪರಿಷತ್ತು ಮುಂದುವರಿಸುತ್ತಿರುವುದು ಶ್ಲಾಘನೀಯವಾಗಿದೆ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಗದಗ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಎ. ಬಳಿಗೇರ, ಶರಣರ ವಚನಗಳು ವಿಶೇಷ ಸಾಹಿತ್ಯಿಕ ಮೌಲ್ಯಗಳನ್ನು ಹೊಂದಿದ್ದು, ಮಕ್ಕಳಿಗೆ ಕಲಿಸುವ ಮೂಲಕ ನಮ್ಮ ಸಂಸ್ಕೃತಿ, ಸಂಪ್ರದಾಯ ಮತ್ತು ನೈತಿಕ ಮೌಲ್ಯಗಳನ್ನು ಬೆಳೆಸಲು ಪ್ರೋತ್ಸಾಹ ನೀಡಬಹುದು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಲಕ್ಷ್ಮೇಶ್ವರ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಲ್.ಎಸ್. ಅರಳಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ಗದಗ ಜಿಲ್ಲಾ ಕದಳಿ ಮಹಿಳಾ ವೇದಿಕೆಯ ಕಾರ್ಯದರ್ಶಿ ಅಶ್ವಿನಿ ಅಂಕಲಕೋಟಿ, ಚಂಬಣ್ಣ ಬಾಳಿಕಾಯಿ, ಅಶೋಕ ಸೊರಟೂರ ಮತ್ತು ಶಕುಂತಲಾ ಅಳಗವಾಡಿ ಉಪಸ್ಥಿತರಿದ್ದರು.

ಹಿರಿಯ ನಾಗರಿಕರ ವೇದಿಕೆಯ ಅಧ್ಯಕ್ಷರು, ತತ್ವಪರರ ತಂಡಗಳು ಮತ್ತು ಅಳಗವಾಡಿ ಕುಟುಂಬದ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶರಣರ ಸಾಹಿತ್ಯದ ಮಹತ್ವವನ್ನು ಮೆಚ್ಚಿದರು. ಕಾರ್ಯಕ್ರಮದ ಸಂದರ್ಭದಲ್ಲಿ ಕಾಶಿ ಯಾತ್ರೆ ಕೈಗೊಂಡ ಯಾತ್ರಾರ್ಥಿಗಳನ್ನು ಸನ್ಮಾನಿಸಲಾಯಿತು.

# ಪದಾಧಿಕಾರಿಗಳು ಚುಟುಕು ಸಾಹಿತ್ಯದ ಬೆಳವಣಿಗೆಗೆ ಶ್ರಮಿಸಬೇಕು

■ವಿಜಯಸಾಕ್ಷಿ ಸುದ್ದಿ, ರೋಣ



ತಾಲೂಕಾ ಪದಾಧಿಕಾರಿಗಳು ಚುಟುಕು ಸಾಹಿತ್ಯದ ಬೆಳವಣಿಗೆಗೆ ಪ್ರಾಮಾಣಿಕವಾಗಿ ಶ್ರಮಿಸಬೇಕು ಎಂದು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ವಿ.ಬಿ. ಸೋಮನಕಟ್ಟಿಮಠ ಹೇಳಿದರು.

ಅವರು ಶನಿವಾರ ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಜರುಗಿದ ತಾಲೂಕಾ ಚುಟುಕು ಸಾಹಿತ್ಯ ಪರಿಷತ್‌ನ ಪದಾಧಿಕಾರಿಗಳ ಸಭೆಗೆ ನೇತ್ರತ್ವ ವಹಿಸಿ ಮಾತನಾಡಿದ ಅವರು, ಚುಟುಕು ಸಾಹಿತ್ಯವು ಅತ್ಯಂತ ವೇಗವಾಗಿ ಜನರ ನಾಡಿ ಮಿಡಿತವನ್ನು ಅರಿಯುವ ಶಕ್ತಿಯನ್ನು ಹೊಂದಿದ್ದು, ಜೀವನಕ್ಕೆ ಶಕ್ತಿ ಮತ್ತು ಪ್ರೇರಣೆ ನೀಡುತ್ತದೆ. ಚುಟುಕು ಸಾಹಿತ್ಯದಿಂದ ಅನೇಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹನೀಯರನ್ನು ನಾವು ಮರೆಯಬಾರದು. ಹೀಗಾಗಿ, ಪದಾಧಿಕಾರಿಗಳು ವಿಶ್ರಾಂತಿ ತೆಗೆದುಕೊಳ್ಳದೆ ಸಾಹಿತ್ಯದ ಬೆಳವಣಿಗೆಯಲ್ಲಿ ತಾವು ತೊಡಗಿಸಿಕೊಳ್ಳಬೇಕು ಎಂದರು.

ಶಹರ ಹಾಗೂ ಗ್ರಾಮೀಣ ಭಾಗಗಳಲ್ಲಿ ಚುಟುಕು ಸಾಹಿತ್ಯದ ಬಗ್ಗೆ ಆಸಕ್ತಿ ಹೊಂದಿರುವ ಸಾಕಷ್ಟು ಜನರನ್ನು ಗುರುತಿಸುವ ಕೆಲಸವನ್ನು ಸಹ ತಾವು ಮಾಡಬೇಕೆಂದು ಹೇಳಿದರು. ವಿಶೇಷವಾಗಿ, ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಲ್ಲಿ ಚುಟುಕು ಸಾಹಿತ್ಯದ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಅವರಿಂದ ಸಾಹಿತ್ಯದ ಹೊಸ ಪರಿಕಲ್ಪನೆಗಳನ್ನು ಪಡೆಯುವುದು ಮುಖ್ಯವಲ್ಲದೆ ಸಾಹಿತ್ಯ ಪರಿಚಯವನ್ನು ಹೆಚ್ಚಿಸಲು ಸಹಾಯ ಮಾಡುವುದಾಗಿದೆ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ತಾಲೂಕಾ ಮಟ್ಟದ ಚುಟುಕು ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಳ್ಳುವ ಬಗ್ಗೆ ಅವರು ಸೂಚಿಸಿದರು. ಸಭೆಯನ್ನು ವಿರುಪಮಾ ಹಿರೇಮಠ ಅಧ್ಯಕ್ಷತೆಯಲ್ಲಿ ನಡೆಸಿದರು. ಚುಟುಕು ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು, ಶಿಕ್ಷಕರು ಮತ್ತು ಸಾಹಿತಿಗಳು ಉಪಸ್ಥಿತರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka